ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 22-03-1996

# *ಬ್ರಾಹ್ಮಣ ಜೀವನದ ವ್ಯಕ್ತಿತ್ವ- ಸರ್ವ ಪ್ರಶ್ನೆಗಳಿಂದ ಅತೀತವಾಗಿ ಸದಾ ಪ್ರಸನ್ನಚಿತ್ತರಾಗಿ ಇರುವುದು*

(ब्राहमण जीवन की पर्सनालिटी - सब प्रश्नों से पार सदा प्रसन्नचित्त रहना)

ಇಂದು ಸರ್ವ ಪಾಪ್ತಿಗಳ ದಾತಾರಾದ ಬಾಪ್‌ದಾದಾರವರು ನಮ್ಮ ಸರ್ವಪ್ರಾಪ್ತಿ ಸ್ವರೂಪ ಮಕ್ಕಳನ್ನು ನೋಡುತ್ತಾ ಇದ್ದಾರೆ. ಬಾಪ್‌ದಾದಾರವರ ಮೂಲಕ ಪ್ರಾಪ್ತಿಗಳೇನೋ ತುಂಬಾ ಆಗಿವೆ, ಅದರ ವರ್ಣನೆ ಮಾಡುವುದಾದರೆ ಅನೇಕವಿದೆ. ಆದರೆ ಉದ್ದವಾದ ಪಟ್ಟಿಯನ್ನು ನಿರೂಪಿಸುವುದಕ್ಕೆ ಬದಲಾಗಿ ಏನು ವರ್ಣನೆ ಮಾಡುತ್ತೀರೆಂದರೆ, "ಈ ಬ್ರಾಹ್ಮಣ ಜೀವನದಲ್ಲಿ ಪ್ರಾಪ್ತಿಯಾಗದಿರುವ ವಸ್ತುವು ಯಾವುದೂ ಇಲ್ಲ" ಎಂದು. ಪಾಪ್ತಿಗಳಂತೂ ಅನೇಕವು ಇರುವುದನ್ನು ಬಾಪ್‌ದಾದಾರವರು ನೋಡುತ್ತಾ ಇದ್ದಾರೆ. ಅನೇಕ ಪ್ರಾಪ್ತಿಗಳಿವೆಯಲ್ಲವೇ, ಪಟ್ಟಿಯು ದೊಡ್ಡದಿದೆಯಲ್ಲವೇ. ಆದ್ದರಿಂದ ಯಾರಿಗೆ ಸರ್ವ ಪ್ರಾಪ್ತಿಗಳೂ ಇವೆಯೋ, ಅದರ ಚಿಹ್ನೆಯು ಪ್ರತ್ಯಕ್ಷ ಜೀವನದಲ್ಲಿ ಏನು ಕಂಡುಬರುತ್ತದೆ? ಅದನ್ನು ತಿಳಿದುಕೊಂಡಿದ್ದೀರಲ್ಲವೇ? ಸರ್ವ ಪ್ರಾಪ್ತಿಗಳಿಂದ ಸಂಪನ್ನ ಆಗಿರುವುದರ ಚಿಹ್ನೆಯು ಏನಾಗಿದೆಯೆಂದರೆ "ಸದಾ ಅವರ ಚೆಹರೆ ಹಾಗೂ ನಡೆವಳಿಕೆಯಲ್ಲಿ ಪ್ರಸನ್ನತೆಯ ಪರ್ಸನಾಲಿಟಿ (ವ್ಯಕ್ತಿತ್ವವು) ಗೋಚರವಾಗುವುದು" ಅವರ ವ್ಯಕ್ತಿತ್ವವು ಯಾರನ್ನಾದರೂ ಆಕರ್ಷಿತರನ್ನಾಗಿ ಮಾಡುವುದು. ಆದ್ದರಿಂದ ಸರ್ವ ಪ್ರಾಪ್ತಿಗಳ ಗುರುತು ಪ್ರಸನ್ನತೆಯ (ವ್ಯಕ್ತಿತ್ವ) ಪರ್ಸನಾಲಿಟಿಯಾಗಿದೆ. ಅದನ್ನು ಸಂತುಷ್ಟತೆಯೆಂದೂ ಕರೆಯಲಾಗುತ್ತದೆ. ಆದರೆ ಈಗಿನ ಸಮಯದಲ್ಲಿ ಮುಖದಲ್ಲಿ ಪ್ರಸನ್ನತೆಯ ಕಾಂತಿಯು ಕಂಡುಬರಬೇಕು. ಒಮ್ಮೊಮ್ಮೆ ಪ್ರಸನ್ನಚಿತ್ತರಾಗಿರುವುದು ಹಾಗೂ ಒಮ್ಮೊಮ್ಮೆ ಪ್ರಶ್ನಚಿತ್ತರಾಗಿರುವುದಲ್ಲ. ಎರಡು ಪ್ರಕಾರದ ಮಕ್ಕಳಿದ್ದಾರೆ. ಒಂದು ಪ್ರಕಾರದವರು ಸಣ್ಣಪುಟ್ಟ ಪರಿಸ್ಥಿತಿಯು ಬಂದರೆ ಪ್ರಶ್ನಚಿತ್ತರಾಗಿ ಬಿಡುತ್ತಾರೆ ಏಕೆ, ಏನು, ಹೇಗೆ, ಯಾವಾಗ ಮುಂತಾದ ಪ್ರಶ್ನೆಗಳು ಅವರನ್ನು ಕಾಡಿಸುತ್ತವೆ ಇವರು ಪ್ರಶ್ನಚಿತ್ತರಾಗಿದ್ದಾರೆ. ಹಾಗೂ ಸರ್ವ ಪ್ರಾಪ್ತಿ ಸ್ವರೂಪರಾದವರು ಸದಾ ಪ್ರಸನ್ನಚಿತ್ತರಾಗಿರುತ್ತಾರೆ. ಅವರಿಗೆ ಎಂದೂ ಯಾವುದೇ ಪರಿಸ್ಥಿತಿಯಲ್ಲಿ ಪ್ರಶ್ನೆಯು ಉದ್ಭವವಾಗುವುದಿಲ್ಲ. ಪ್ರಶ್ನೆಯು ಕಾಡಿಸುವುದಿಲ್ಲ, ಏಕೆ? ಏಕೆಂದರೆ ಸರ್ವ ಪ್ರಾಪ್ತಿಗಳಿಂದ ಸಂಪನ್ನರಾಗಿದ್ದಾರೆ. ಹೀಗೆ ಇದು ಏಕೆ, ಏನು ಎನ್ನುವ ಪ್ರಶ್ನೆಗಳೇನಿವೆಯೋ ಅವು ಗಾಬರಿ ಅಥವಾ ಗಡಿಬಿಡಿಯ ಚಿಹ್ನೆಯಾಗಿವೆ. ಯಾರು ಸಂಪನ್ನರಾಗಿರುತ್ತಾರೋ ಅವರಲ್ಲಿ ಗಾಬರಿ ಅಥವಾ ಗೊಂದಲವಿರುವುದಿಲ್ಲ. ಯಾರು ಖಾಲಿಯಾಗಿರುತ್ತಾರೋ ಅವರಲ್ಲಿ ಗೊಂದಲ, ಗಾಬರಿಯಾಗುತ್ತದೆ. ಆದ್ದರಿಂದ ಸದಾ ನಾನು ಪ್ರಸನ್ನಚಿತ್ತನಾಗಿರುತ್ತೇನೆಯೇ ಎಂದು ನಿಮ್ಮೊಂದಿಗೆ ಕೇಳಿಕೊಳ್ಳಿರಿ. ಪ್ರಸನ್ನಚಿತ್ತರಾಗಿರುತ್ತೀರಾ? ಒಮ್ಮೊಮ್ಮೆ ಪ್ರಸನ್ನಚಿತ್ತರಾಗಿರುವುದಲ್ಲ. ಸದಾ ಪ್ರಸನ್ನಚಿತ್ತರಾಗಿರಬೇಕು. 10 ವರ್ಷದಿಂದ ಜ್ಞಾನದಲ್ಲಿ ಇರುವವರು ಸದಾ

ಪ್ರಸನ್ನಚಿತ್ತರಾಗಿರುತ್ತಾರೋ ಅಥವಾ ಇಲ್ಲವೋ, ಹೌದು ಎಂದು ಹೇಳುತ್ತಿಲ್ಲ. ಬಹುಶಃ ಯೋಚನೆ ಮಾಡುತ್ತಾ ಇದ್ದಾರೆ. ಪ್ರಸನ್ನತೆಯು ಒಂದುವೇಳೆ ಕಡಿಮೆಯಿದ್ದರೆ ಅದರ ಕಾರಣವು ಪ್ರಾಪ್ತಿಯು ಕಡಿಮೆ ಇರುವುದಾಗಿದೆ ಹಾಗೂ ಪ್ರಾಪ್ತಿಯು ಕಡಿಮೆ ಇರುವ ಕಾರಣದಿಂದ ಯಾವುದಾದರೊಂದು ಇಚ್ಛೆಯಿರುತ್ತದೆ. ಇಚ್ಛೆಯ ಬುನಾದಿ ಈರ್ಷೆ ಹಾಗೂ ಅಪ್ರಾಪ್ತಿಯಾಗಿದೆ. ಅನೇಕ ಸೂಕ್ಷ್ಮವಾದ ಇಚ್ಛೆಗಳು ಅಪ್ರಾಪ್ತಿಯ ಕಡೆಗೆ ಬುದ್ಧಿಯನ್ನು ಸೆಳೆಯುತ್ತವೆ. ಆಮೇಲೆ ರಾಯಲ್ ರೂಪದಲ್ಲಿ ಏನು ಹೇಳುತ್ತಾರೆಂದರೆ ನನಗೆ ಇಚ್ಛೆಯೇನಿಲ್ಲ, ಆದರೆ ಆಗಿಬಿಟ್ಟರೆ ಒಳ್ಳೆಯದು. ಆದರೆ ಎಲ್ಲಿ ಅಲ್ಪಕಾಲದ ಇಚ್ಛೆಯಿದೆಯೋ ಅಲ್ಲಿ ಒಳ್ಳೆಯದಾಗುವುದು ಸಾಧ್ಯವಿಲ್ಲ. ಆದ್ದರಿಂದ ಏನು ಪರಿಶೀಲನೆ ಮಾಡಿಕೊಳ್ಳಿರೆಂದರೆ ಜ್ಞಾನದ ಜೀವನದಲ್ಲಾಗಲೀ, ಜ್ಞಾನದ ರಾಯಲ್ ರೂಪದ ಇಚ್ಛೆಗಳು, ಅಥವಾ ಸ್ಥೂಲರೂಪದ ಇಚ್ಛೆಗಳು ಇವೆಯೇ ಎಂದು. ಈಗ ಸ್ಥೂಲರೂಪದ ಇಚ್ಛೆಗಳು ಸಮಾಪ್ತಿಯಾಗಿರುವುದನ್ನು ನೋಡಬಹುದು. ಆದರೆ ರಾಯಲ್ (ಸೂಕ್ಷ್ಮವಾದ) ಇಚ್ಛೆಗಳು ಜ್ಞಾನದಲ್ಲಿ ಬಂದನಂತರ ಸೂಕ್ಷ್ಮರೂಪದಲ್ಲಿ ಉಳಿದುಕೊಂಡಿವೆ. ಅದನ್ನು ಪರಿಶೀಲನೆ ಮಾಡಿಕೊಳ್ಳಿರಿ. ಏಕೆಂದರೆ ಸದಾ ಬಾಪ್‌ದಾದಾರವರು ಈಗ ಮಕ್ಕಳೆಲ್ಲರನ್ನೂ ತಂದೆಯ ಸಮಾನ ಸಂಪನ್ನರನ್ನಾಗಿ, ಸಂಪೂರ್ಣರನ್ನಾಗಿ ಮಾಡಲು ಬಯಸುತ್ತಿದ್ದಾರೆ. ಯಾರೊಂದಿಗೆ ಪ್ರೀತಿಯಿರುತ್ತದೆಯೋ ಅವರ ಸಮಾನ ಆಗುವುದೇನೂ ಕಷ್ಟವಾದ ಕಾರ್ಯವಾಗಿರುವುದಿಲ್ಲ. ಬಾಪ್‌ದಾದಾರ ಮೇಲೆ ನಿಮ್ಮೆಲ್ಲರಿಗೂ ತುಂಬಾ ಪ್ರೀತಿಯಿದೆಯೋ ಅಥವಾ ಕೇವಲ ಪ್ರೀತಿಯಿದೆಯೋ? ಏನು ಇದೆ? (ತುಂಬಾ ಪ್ರೀತಿಯಿದೆ) ಪಕ್ಕಾ ಇದೆಯೇ? ಹಾಗಾದರೆ ಪ್ರೀತಿಯ ಸಲುವಾಗಿ ತ್ಯಾಗ ಮಾಡುವುದು ಅಥವಾ ಪರಿವರ್ತನೆಯಾಗುವುದು ದೊಡ್ಡ ಸಂಗತಿಯಾಗಿದೆಯೇ? ಇಲ್ಲ ತಾನೇ. ಹಾಗಾದರೆ ಪೂರ್ತಿ ತ್ಯಾಗ ಮಾಡಿದ್ದೀರಾ? ತಂದೆಯು ಏನು ಹೇಳುತ್ತಾರೋ, ತಂದೆಯು ಏನು ಬಯಸುತ್ತಾರೋ ಅದನ್ನು ಮಾಡಿದ್ದೀರಾ? ಸದಾ? ಒಮ್ಮೊಮ್ಮೆ ಮಾಡುವುದರಿಂದ ಕೆಲಸ ನಡೆಯುವುದಿಲ್ಲ. ಸದಾ ಕಾಲದ ರಾಜ್ಯಭಾಗ್ಯವನ್ನು ಪ್ರಾಪ್ತಿಮಾಡಿಕೊಳ್ಳಬೇಕೆಂದು ಬಯಸುತ್ತೀರೋ ಅಥವಾ ಒಮ್ಮೊಮ್ಮೆ ಪಡೆಯಲು ಬಯಸುತ್ತೀರೋ? ಸದಾಕಾಲದ ರಾಜ್ಯಭಾಗ್ಯವನ್ನು ಬಯಸುತ್ತೀರಲ್ಲವೇ? ಆದ್ದರಿಂದ ಸದಾ ಪ್ರಸನ್ನತೆಯ ಭಾವದ ಹೊರತು ಅನ್ಯ ಯಾವ ಭಾವವೂ ಚೆಹರೆಯಲ್ಲಿ ಅಥವಾ ನಡೆವಳಿಕೆಯಲ್ಲಿ ಕಂಡುಬರದಿರಲಿ. ಈ ದಿನ ಸಹೋದರಿಯವರ ಅಥವಾ ಸಹೋದರರ ಮೂಡ್ (ಮನೋಭಾವವು) ಬೇರೆ ಆಗಿದೆ ಎಂದು ಒಮ್ಮೊಮ್ಮೆ ಹೇಳುತ್ತಾರಲ್ಲವೇ. ಹೀಗೆ ಹೇಳುತ್ತಾರಲ್ಲವೇ. ಈ ದಿನ ನನ್ನ ಮೂಡ್ ಬೇರೆ ಆಗಿದೆಯೆಂದು ನೀವೂ ಹೇಳುತ್ತೀರಿ. ಇದನ್ನು ಏನೆಂದು ಹೇಳಬಹುದು. ಸದಾ ಪ್ರಸನ್ನತೆ ಇದೆಯೆಂದು ಹೇಳಬಹುದೇ? **ಹಲವು ಮಕ್ಕಳು ಪ್ರಶಂಸೆಯ ಆಧಾರದ ಮೇಲೆ ಪ್ರಸನ್ನತೆಯು ಅನುಭವ ಮಾಡುತ್ತಾರೆ. ಆದರೆ ಆ ಪ್ರಸನ್ನತೆಯು ಅಲ್ಪಕಾಲದ್ದಾಗಿದೆ. ಈ ದಿನ ಇರುತ್ತದೆ. ಸ್ವಲ್ಪ ಸಮಯದ ನಂತರ ಸಮಾಪ್ತಿಯಾಗಿ ಬಿಡುತ್ತದೆ. ಆದ್ದರಿಂದ ಏನು ಪರಿಶೀಲನೆ ಮಾಡಿಕೊಳ್ಳಬೇಕೆಂದರೆ ನನ್ನ ಪ್ರಸನ್ನತೆಯು ಪ್ರಶಂಸೆಯ ಆಧಾರವನ್ನು ಅವಲಂಬಿಸಿಲ್ಲವೇ ಎಂದು.** ಇದನ್ನು ಯಾವುದಕ್ಕೆ ಹೇಳಿಕೆ ಮಾಡಬಹುದೆಂದರೆ, ಈಗಿನ ಕಾಲದಲ್ಲಿ ಮನೆಯನ್ನು ಕಟ್ಟುವಾಗ ಸಿಮೆಂಟಿನ ಜೊತೆಯಲ್ಲಿ ಮರಳಿನ ಪ್ರಮಾಣವನ್ನು ಜಾಸ್ತಿ ಹಾಕಿಬಿಡುತ್ತಾರೆ. ಬೆರಕೆ ಮಾಡುತ್ತಾರೆ. ಹಾಗೆಯೇ ಇದರಲ್ಲಿಯೂ ಬುನಾದಿಯು ಬೆರಕೆ ಆಗಿದೆ. ಯಥಾರ್ಥವಾದುದಾಗಿಲ್ಲ. ಆದ್ದರಿಂದ ಸ್ವಲ್ಪವೇ ಪರಿಸ್ಥಿತಿಯ ಬಿರುಗಾಳಿಯು ಬಂದರೆ ಅಥವಾ ಯಾವುದಾದರೂ ಪ್ರಕಾರದ ಏರುಪೇರಾದರೆ ಅದು ಪ್ರಸನ್ನತೆಯನ್ನು ಸಮಾಪ್ತಿ ಮಾಡಿಬಿಡುತ್ತದೆ. ಪ್ರಶಂಸೆಯು ಬುನಾದಿ ಆಗಿಲ್ಲ ತಾನೇ?

ಬಾಪ್‌ದಾದಾರು ಮುಂಚೆಯೂ ಏನು ಹೇಳಿದ್ದೇವೆ. ಈಗ ಪುನಃ ಒತ್ತಿ ಹೇಳುತ್ತಿದ್ದಾರೆ. ರಾಯಲ್ ರೂಪದ ಇಚ್ಛೆಯ ಸ್ವರೂಪವು ಹೆಸರು, ಗೌರವ ಹಾಗೂ ಕೀರ್ತಿಯಾಗಿದೆ. ಆಧಾರವೇನೋ ಸೇವೆಯದನ್ನು ತೆಗೆದುಕೊಳ್ಳುತ್ತಾರೆ. ಸೇವೆಯಲ್ಲಿ ಹೆಸರು ಗಳಿಸಬೇಕು ಎಂದು ಬಯಸುತ್ತಾರೆ. ಯಾರು ಹೆಸರಿಗಾಗಿ ಸೇವೆಮಾಡುತ್ತಾರೋ ಅಲ್ಪಕಾಲದವರೆಗೆ ಅವರ ಹೆಸರು ಪ್ರಖ್ಯಾತವಾಗಿ ಬಿಡುತ್ತದೆ. ಬಹಳ ಒಳ್ಳೆಯ ಸೇವಾಧಾರಿಗಳು ಬಹಳ ಚೆನ್ನಾಗಿ ಆಕರ್ಷಣೆ ಮಾಡುವವರು ಎಂಬ ಹೆಸರು ಗಳಿಸುತ್ತಾರೆ. ಆದರೆ ಹೆಸರಿನ ಆಧಾರದಿಂದ ಸೇವೆ ಮಾಡುವವರ ಹೆಸರು ಉನ್ನತ ಪದವಿಯನ್ನು ಪಡೆಯುವವರಲ್ಲಿ ಹಿಂದೆ ಉಳಿದುಬಿಡುತ್ತದೆ. ಏಕೆಂದರೆ ಕಚ್ಚಾ ಆಗಿರುವ ಫಲವನ್ನು ತಿಂದುಬಿಟ್ಟರು. ಪಕ್ವವಾಗಲು ಬಿಡಲಿಲ್ಲ. ಪಕ್ವವಾದ ಹಣ್ಣನ್ನು ಎಲ್ಲಿ ತಿನ್ನುವರು. ಕಚ್ಚಾ ಆಗಿರುವುದನ್ನೇ ತಿಂದುಹಾಕಿದರು. ಈಗತಾನೇ ಸೇವೆ ಮಾಡಿದರು ಈಗಲೇ ಹೆಸರನ್ನು ಪಡೆದರು. ಇದೇ ಕಚ್ಚಾ ಫಲವಾಗಿದೆ. ಸೇವೆಯನ್ನಂತೂ ನಾನು ತುಂಬಾ ಮಾಡಿದೆನು. ಎಲ್ಲರಿಗಿಂತಲೂ ಹೆಚ್ಚು ಸೇವೆಗೆ ನಿಮಿತ್ತನು ನಾನಾಗಿದ್ದೇನೆ ಎಂದು ತಿಳಿಯುತ್ತಾರೆ. ಇದು ಹೆಸರಿನ ಆಧಾರದಿಂದ ಮಾಡುವ ಸೇವೆಯಾಯಿತು. ಇವರು ಕಚ್ಚಾ ಫಲವನ್ನು ತಿನ್ನುವವರಾದರು. ಕಚ್ಚಾ ಫಲದಲ್ಲಿ ಶಕ್ತಿಯಿರುತ್ತದೆಯೇ? ಅಥವಾ ಸೇವೆ ಮಾಡಿದರೆ ಸೇವೆಯ ಪರಿಣಾಮದಿಂದ ನನಗೆ ಗೌರವವು ದೊರೆಯಬೇಕು ಎಂದು ತಿಳಿಯುತ್ತಾರೆ. ಇದು ಗೌರವ ಅಥವಾ ಸನ್ಮಾನವಲ್ಲ. ಅಭಿಮಾನವಾಗಿದೆ. ಎಲ್ಲಿ ಅಭಿಮಾನವಿದೆಯೋ ಅಲ್ಲಿ ಪ್ರಸನ್ನತೆಯು ಇರಲು ಸಾಧ್ಯವಿಲ್ಲ. ಎಲ್ಲಕ್ಕಿಂತಲೂ ದೊಡ್ಡ ಸ್ಥಾನ ಮಾನವಾದ ಬಾಪ್‌ದಾದಾರ ಹೃದಯದಲ್ಲಿ ಸ್ಥಾನವನ್ನು ಪ್ರಾಪ್ತಿಮಾಡಿಕೊಳ್ಳಿರಿ. ಆತ್ಮರ ಹೃದಯದಲ್ಲಿ ಒಂದುವೇಳೆ ಸ್ಥಾನವು ಸಿಕ್ಕಿಬಿಟ್ಟರೂ ಸಹ ಆತ್ಮರು ಸ್ವಯಂ ತಾವೇ ತೆಗೆದುಕೊಳ್ಳುವವರಾಗಿದ್ದಾರೆ. ಮಾಸ್ಟರ್ ದಾತಾ ಆಗಿದ್ದಾರೆ. ದಾತಾ ಆಗಿಲ್ಲ. ಆದ್ದರಿಂದ ಸ್ಥಾನವು ಬೇಕಾಗಿದ್ದರೆ, ಸದಾ ಬಾಪ್‌ದಾದಾರ ಹೃದಯದಲ್ಲಿ ನಿಮ್ಮ ಸ್ಥಾನವನ್ನು ಪ್ರಾಪ್ತಿ ಮಾಡಿಕೊಳ್ಳಿರಿ. ಈ ರಾಯಲ್ ಇಚ್ಛೆಗಳೆಲ್ಲವೂ ಪ್ರಾಪ್ತಿಸ್ವರೂಪ ಆಗಲು ಬಿಡುವುದಿಲ್ಲ. ಆದ್ದರಿಂದ ಪ್ರಸನ್ನತೆಯ ವ್ಯಕ್ತಿತ್ವವು ಸದಾ ಚೆಹರೆ(ಮುಖ) ಹಾಗೂ ನಡೆವಳಿಕೆಯಲ್ಲಿ ಕಂಡುಬರುವುದಿಲ್ಲ. ಯಾವುದಾದರೂ ಪರಿಸ್ಥಿತಿಯಲ್ಲಿ ಪ್ರಸನ್ನತೆಯ ಮನೋಭಾವವು ಪರಿವರ್ತನೆಯಾದರೆ ಸದಾ ಕಾಲದ ಪ್ರಸನ್ನತೆಯೆಂದು ಹೇಳುವುದಿಲ್ಲ. ಬ್ರಾಹ್ಮಣ ಜೀವನದ ಮನೋಭಾವವು (ಮೂಡ್) ಸದಾ ಹರ್ಷಿತ (ಚೆಯರ್‌ಫುಲ್) ಹಾಗೂ ಕೇರ್ ಫುಲ್ (ಜಾಗರೂಕ) ಆಗಿರುವುದಾಗಿದೆ. ಮೂಡ್ ಬದಲಾವಣೆ ಆಗಬಾರದು. ಆಮೇಲೆ ರಾಯಲ್ ರೂಪದಲ್ಲಿ ಏನು ಹೇಳುತ್ತಾರೆಂದರೆ, ಈ ದಿನ ನನಗೆ ತುಂಬಾ ಏಕಾಂತದ ಅವಶ್ಯಕತೆಯಿದೆ ಎಂದು. ಏಕೆ ಬೇಕು? ಸೇವೆ ಮಾಡಬೇಕೋ ಅಥವಾ ಪರಿವಾರದಿಂದ ದೂರವಿದ್ದುಕೊಂಡು ಶಾಂತಿಯು ಬೇಕೋ, ಏಕಾಂತವು ಬೇಕೋ. ಈದಿನ ನನ್ನ ಮೂಡ್ ಇಂತಹದ್ದಾಗಿದೆ. ಹೀಗೆ ಮೂಡನ್ನು ಬದಲಾಯಿಸಬೇಡಿರಿ. ಕಾರಣವೇನೇ ಇರಲಿ. ಆದರೆ ನೀವು ಕಾರಣವನ್ನು ನಿವಾರಣೆ ಮಾಡುವವರಾಗಿದ್ದೀರೋ ಅಥವಾ ಕಾರಣದಲ್ಲಿ ಸಿಕ್ಕಿಬೀಳುವವರಾಗಿದ್ದೀರೋ? ನಿವಾರಣೆ ಮಾಡುವವರಲ್ಲವೇ. ಏನು ಗುತ್ತಿಗೆಯನ್ನು ತೆಗೆದುಕೊಂಡಿದ್ದೀರಿ? ನೀವು ಕಂಟ್ರಾಕ್ಟರ್ ಆಗಿದ್ದೀರಲ್ಲವೇ? ಆದ್ದರಿಂದ ಏನು ಕಾಂಟ್ರಾಕ್ಟ್ ತೆಗೆದುಕೊಂಡಿದ್ದೀರಿ? ಪ್ರಕೃತಿಯ ಮೂಡನ್ನು ಸಹ ಪರಿವರ್ತನೆ ಮಾಡುವೆವು ಎಂದು. ಪ್ರಕೃತಿಯನ್ನೂ ಸಹ ಪರಿವರ್ತನೆ ಮಾಡಬೇಕಲ್ಲವೇ? ಪ್ರಕೃತಿಯನ್ನು ಪರಿವರ್ತನೆ ಮಾಡುವವರು ನಿಮ್ಮ ಮೂಡ್ ಪರಿವರ್ತನೆ ಮಾಡಿಕೊಳ್ಳಲು ಸಾಧ್ಯವಿಲ್ಲವೇ? ಬದಲಾವಣೆಯಾಗುತ್ತದೆಯೋ ಇಲ್ಲವೋ? ಒಮ್ಮೊಮ್ಮೆ ಆಗುತ್ತದೆಯೇ? ಆಮೇಲೆ ಏನು

ಹೇಳುತ್ತೀರೆಂದರೆ, ಸಾಗರದ ತೀರದಲ್ಲಿ ಹೋಗಿ ಕುಳಿತುಕೊಳ್ಳುತ್ತೇನೆ ಎಂದು. ಜ್ಞಾನಸಾಗರವಲ್ಲ ಸ್ಥೂಲಸಾಗರದ ತೀರದಲ್ಲಿ. ವಿದೇಶೀಯರು ಹೀಗೆ ಮಾಡುತ್ತಾರಲ್ಲವೇ? ಅಥವಾ ಈದಿನ ಒಂಟಿಯಾಗಿ ಇದ್ದೇನೆನ್ನಿಸುತ್ತದೆ ಎಂದು ಹೇಳುತ್ತಾರೆ. ಹಾಗಾದರೆ ತಂದೆಯ ಕಂಬೈಂಡ್ ರೂಪವು ಎಲ್ಲಿಗೆ ಹೋಯಿತು? ತಂದೆಯನ್ನು ದೂರ ಮಾಡಿಬಿಟ್ಟಿದ್ದೀರಾ? ಕಂಬೈಂಡ್ ಆಗಿದ್ದವರು ಒಂಟಿಯಾಗಿ ಬಿಟ್ಟಿರಿ. ಇದನ್ನು ಪ್ರೀತಿಯೆಂದು ಕರೆಯಲಾಗುತ್ತದೆಯೇ? ಹೀಗೆ ಯಾವುದೇ ಪ್ರಕಾರದ ಮನೋಭಾವ ಮೂಡ್ ಆಫ್ ಆಗುವುದು ದೊಡ್ಡ ಕೊರತೆಯಾಯಿತು. ಆದರೆ ಮೂಡ್ ಪರಿವರ್ತನೆಯಾಗುವುದೂ ಸಹ ಸರಿಯಲ್ಲ. ಮೂಡ್ ಆಫ್ ಆದವರಂತೂ ಅನೇಕ ಭಿನ್ನ ಭಿನ್ನ ಪ್ರಕಾರದ ಲೀಲೆಯನ್ನು ತೋರಿಸುತ್ತಾರೆ. ಹಿರಿಯರಿಗೆ ತುಂಬಾ ಲೀಲೆಯನ್ನು ತೋರಿಸುವುದನ್ನು ಅಥವಾ ತಮ್ಮ ಸಾಥಿಗಳಿಗೆ ತುಂಬಾ ಲೀಲೆಯನ್ನು ತೋರಿಸುವುದನ್ನು ಬಾಪ್‌ದಾದಾರು ನೋಡುತ್ತಾರೆ. ಇಂತಹ ಆಟಗಳನ್ನು ಆಡಬೇಡಿರಿ. ಏಕೆಂದರೆ ಬಾಪ್‌ದಾದಾರವರಿಗೆ ಎಲ್ಲಾ ಮಕ್ಕಳೊಂದಿಗೆ ಪ್ರೀತಿಯಿದೆ. ಯಾರು ವಿಶೇಷವಾಗಿ ನಿಮಿತ್ತರಾಗಿದ್ದಾರೆಯೋ ಅವರು ತಂದೆಯ ಸಮಾನರಾಗಬೇಕೆಂದೂ ಹಾಗೂ ಉಳಿದವರು ಆದರೆ ಆಗಲಿ, ಇಲ್ಲದಿದ್ದರೆ ಬೇಡ ಎಂದು ಬಾಪ್‌ದಾದಾರವರು ಬಯಸುವುದಿಲ್ಲ. ಎಲ್ಲರನ್ನೂ ಸಮಾನರನ್ನಾಗಿ ಮಾಡಬೇಕಾಗಿದೆ. ಇದೇ ಬಾಪ್‌ದಾದಾರವರ ಪ್ರೀತಿಯಾಗಿದೆ. ಆದ್ದರಿಂದ ಪ್ರೀತಿಯ ಪ್ರತ್ಯುತ್ತರ ಕೊಡುವುದು ಬರುತ್ತದೆಯೇ ಅಥವಾ ಬಿಂಕ (ವಯ್ಯಾರ) ಬಿನ್ನಾಣದಿಂದ ಪ್ರತಿಕ್ರಿಯೆ ತೋರಿಸುತ್ತೀರೋ? ಒಮ್ಮೊಮ್ಮೆ ಬಿಂಕ ಬಿನ್ನಾಣವನ್ನು ತೋರಿಸುತ್ತಾರೆ ಹಾಗೂ ಒಮ್ಮೊಮ್ಮೆ ಸಮಾನರಾಗಿ ತೋರಿಸುತ್ತಾರೆ. ಈಗ ಈ ಸಮಯವು ಸಮಾಪ್ತಿಯಾಯಿತು.

ಈಗ ಡೈಮಂಡ್ ಜೂಬ್ಲಿ ಆಚರಿಸುತ್ತಿದ್ದೀರಲ್ಲವೇ? 60 ವರ್ಷ ವಯಸ್ಸಾದ ನಂತರ ಸಾಮಾನ್ಯವಾಗಿಯೂ ವಾನಪ್ರಸ್ಥವು ಪ್ರಾರಂಭವಾಗುತ್ತದೆ. ಇನ್ನೂ ನೀವು ಸಣ್ಣ ಮಕ್ಕಳಲ್ಲ. ಈಗ ವಾನಪ್ರಸ್ಥ ಅರ್ಥಾತ್ ಎಲ್ಲವನ್ನೂ ತಿಳಿದುಕೊಂಡಿರುವವರು ಅನುಭವೀ ಆತ್ಮರಾಗಿದ್ದೀರಿ. ಜ್ಞಾನಪೂರ್ಣ ರಾಗಿದ್ದೀರಿ. ಶಕ್ತಿಪೂರ್ಣರಾಗಿದ್ದೀರಿ. ಸಫಲತಾಪೂರ್ಣರಾಗಿದ್ದೀರಿ. ಜ್ಞಾನ ಪೂರ್ಣರಾಗಿದ್ದೀರಾ? ಶಕ್ತಿಪೂರ್ಣರಾಗಿದ್ದೀರಾ? ಸಫಲತಾಪೂರ್ಣರಾಗಿದ್ದೀರಾ? ಒಮ್ಮೊಮ್ಮೆ ಆಗಿರುತ್ತೀರೋ ಅಥವಾ ಸದಾ ಆಗಿದ್ದೀರೋ? ಸದಾ ಹೇಗೆ ಜ್ಞಾನಪೂರ್ಣರಾಗಿದ್ದೀರೋ ಹಾಗೆಯೇ ಶಕ್ತಿಪೂರ್ಣರೂ, ಸಫಲತಾಪೂರ್ಣರೂ ಕೂಡ ಆಗುತ್ತಿದ್ದೀರಾ? ಒಮ್ಮೊಮ್ಮೆ ಸಫಲತಾಪೂರ್ಣರಾಗುತ್ತಿಲ್ಲ ಏಕೆ? ಕಾರಣವೇನು? ಬಾಪ್‌ದಾದಾರು ಏನು ನೋಡಿದರು- ಮೆಜಾರಿಟಿ ಮಕ್ಕಳು ತಮ್ಮ ದುರ್ಬಲ(ಬಲಹೀನ) ಸಂಕಲ್ಪವನ್ನು ಮೊದಲೇ ಪ್ರಕಟ ಮಾಡುತ್ತಾರೆ. ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ ಎನ್ನುವ ಸಂಕಲ್ಪವನ್ನು ತಂದುಕೊಳ್ಳುತ್ತಾರೆ. ಆದ್ದರಿಂದ ತಮ್ಮ ಈ ದುರ್ಬಲ ಸಂಕಲ್ಪವೇ ಪ್ರಸನ್ನಚಿತ್ತರನ್ನಾಗಿ ಮಾಡದೆ ಪ್ರಶ್ನಚಿತ್ತರನ್ನಾಗಿ ಮಾಡುತ್ತದೆ. ಆಗುತ್ತದೆಯೋ ಇಲ್ಲವೋ? ಏನಾಗುತ್ತದೆಯೋ? ಗೊತ್ತಿಲ್ಲ. ಈ ಸಂಕಲ್ಪವೇ ಗೋಡೆಯಾಗಿ ಬಿಡುತ್ತದೆ ಹಾಗೂ ಸಫಲತೆಯು ಆ ಗೋಡೆಯೊಳಗೆ ಅಡಗಿಹೋಗಿಬಿಡುತ್ತದೆ. ನಿಶ್ಚಯ ಬುದ್ಧಿಯುಳ್ಳವರು ವಿಜಯಶಾಲಿಯಾಗುತ್ತಾರೆ ಎನ್ನುವುದು ನಿಮ್ಮ ಸ್ಲೋಗನ್ ಆಗಿದೆಯಲ್ಲವೇ? ಅಥವಾ 10 ವರ್ಷದವರ ಸ್ಲೋಗನ್ ಆಗಿದೆಯೇ? ಪಕ್ಕಾ ಆಗಿದೆಯೇ? ಇದು ಈ ಸಮಯದ ಸ್ಲೋಗನ್ ಆಗಿದೆ. ಭವಿಷ್ಯದಲ್ಲ. ವರ್ತಮಾನ ಸಮಯದ್ದಾಗಿದೆ. ಆದ್ದರಿಂದ ಸದಾ ಹೇಗಿರಬೇಕು? ಪ್ರಸನ್ನ

ಚಿತ್ತರಾಗಿರಬೇಕೋ ಅಥವಾ ಪ್ರಶ್ನಚಿತ್ತರಾಗಿರಬೇಕೋ? ಮಾಯೆ ತನ್ನದೇ ದುರ್ಬಲ ಸಂಕಲ್ಪದ ಜಾಲವನ್ನು ಹರಡಿ ಬಿಡುತ್ತದೆ. ಹಾಗೂ ನಿಮ್ಮ ಬಲೆಯಲ್ಲಿ ನೀವೇ ಸಿಕ್ಕಿಬೀಳುತ್ತೀರಿ. ವಿಜಯಶಾಲಿಗಳಾಗಿದ್ದೀರಲ್ಲವೇ? ಆದ್ದರಿಂದ ಈ ದುರ್ಬಲತೆಯ ಜಾಲವನ್ನು ಸಮಾಪ್ತಿಮಾಡಿರಿ. ಸಿಕ್ಕಿಹಾಕಿಕೊಳ್ಳಬೇಡಿರಿ. ಆದರೆ ಸಮಾಪ್ತಿ ಮಾಡಿರಿ. ಸಮಾಪ್ತಿ ಮಾಡುವ ಶಕ್ತಿಯಿದೆಯೇ? ನಿಧಾನವಾಗಿ ಸಮಾಪ್ತಿ ಮಾಡಲು ಹೋಗಬೇಡಿರಿ. ತಕ್ಷಣವೇ ಒಂದು ಸೆಕೆಂಡಿನಲ್ಲಿ ಈ ಜಾಲವನ್ನು ಬೆಳೆಯದಂತೆ ಮಾಡಿರಿ. ಒಂದುವೇಳೆ ಒಂದು ಸಲವಾದರೂ ಈ ಬಲೆಯಲ್ಲಿ ಸಿಕ್ಕಿಬಿದ್ದರೆ ಅದರಿಂದ ಹೊರಗೆ ಬರುವುದು ಕಷ್ಟವಿದೆ. "ವಿಜಯವು ನನ್ನ ಜನ್ಮಸಿದ್ಧ ಅಧಿಕಾರವಾಗಿದೆ". "ಸಫಲತೆಯು ನನ್ನ ಜನ್ಮಸಿದ್ಧ ಅಧಿಕಾರವಾಗಿದೆ" ಎನ್ನುವ ನಿಶ್ಚಯವಿರಲಿ. ಈ ಜನ್ಮಸಿದ್ಧ ಅಧಿಕಾರವು ಪರಮಾತ್ಮದತ್ತವಾದ (ಈಶ್ವರೀಯ) ಜನ್ಮಸಿದ್ಧ ಅಧಿಕಾರವಾಗಿದೆ. ಇದನ್ನು ಯಾರೂ ಕಸಿದುಕೊಳ್ಳಲು ಸಾಧ್ಯವಿಲ್ಲ. ಇಂತಹ ನಿಶ್ಚಯಬುದ್ಧಿಯುಳ್ಳವರು ಸದಾ ಸಹಜವಾಗಿ ಹಾಗೂ ಸ್ವತಃವಾಗಿ ಪ್ರಸನ್ನಚಿತ್ತರಾಗಿರುತ್ತಾರೆ. ಪರಿಶ್ರಮಿಸುವ ಅಗತ್ಯವೂ ಇರುವುದಿಲ್ಲ.

ಅಸಫಲತೆಯಾಗಲು ಎರಡನೆಯ ಕಾರಣವು ಏನಾಗಿದೆಯೆಂದರೆ, ಸಮಯ, ಸಂಕಲ್ಪ, ಸಂಪತ್ತು ಎಲ್ಲವನ್ನೂ ಸಫಲ ಮಾಡಿಕೊಳ್ಳಿರೆಂದು ನೀವೇ ಅನ್ಯರಿಗೂ ಹೇಳುತ್ತೀರಿ. ಆದ್ದರಿಂದ ಸಫಲ ಮಾಡಿಕೊಳ್ಳಿರಿ ಅರ್ಥಾತ್ ಸಫಲತೆಯನ್ನು ಪಡೆಯಿರಿ. ಸಫಲ ಮಾಡಿಕೊಳ್ಳುವುದೇ ಸಫಲತೆಯ ಆಧಾರವಾಗಿದೆ. ಒಂದುವೇಳೆ ಸಫಲತೆಯು ದೊರೆಯದಿದ್ದರೆ, ಅದರ ಕಾರಣವೇನಾಗಿದೆಯೆಂದರೆ ನೀವು ಯಾವುದಾದರೂ ಒಂದು ಖಜಾನೆಯನ್ನು ಸಫಲ ಮಾಡಿಕೊಂಡಿಲ್ಲ. ಆದ್ದರಿಂದ ಸಫಲತೆಯು ದೊರೆಯಲಿಲ್ಲ. ಆದ್ದರಿಂದ ಯಾವ ಖಜಾನೆಯನ್ನು ಸಫಲ ಮಾಡಿಕೊಂಡಿಲ್ಲ, ವ್ಯರ್ಥವಾಗಿ ಕಳೆದಿದ್ದೇನೆ ಎಂದು ಪರಿಶೀಲನೆ ಮಾಡಿಕೊಳ್ಳಿರಿ. ಖಜಾನೆಗಳ ಪಟ್ಟಿಯನ್ನು ತಿಳಿದುಕೊಂಡಿದ್ದೀರಲ್ಲವೇ. ಖಜಾನೆಗಳನ್ನು ಸಫಲ ಮಾಡಿಕೊಂಡರೆ, ಸಫಲತೆಯು ಸ್ವತಃವಾಗಿಯೇ ಪ್ರಾಪ್ತಿಯಾಗಿ ಬಿಡುವುದು. ಇದು ಆಸ್ತಿಯೂ(ವಾರಸತ್ವ) ಆಗಿದೆ. ವರದಾನವೂ ಆಗಿದೆ, ಸಫಲ ಮಾಡಿಕೊಳ್ಳಿರಿ ಹಾಗೂ ಸಫಲತೆಯನ್ನು ಪಡೆಯಿರಿ. ಸಫಲ ಮಾಡಿಕೊಳ್ಳುವುದು ಬರುತ್ತದೆಯೋ ಅಥವಾ ಇಲ್ಲವೋ ಹೌದು ಅಥವಾ ಇಲ್ಲ ಎಂದು ಹೇಳಿರಿ. ಹಾಗಾದರೆ ಸಫಲತೆಯು ದೊರೆಯುತ್ತದೆಯೇ? ಸಫಲ ಮಾಡಿಕೊಳ್ಳುವುದು ಬೀಜ ಬಿತ್ತುವುದಾಗಿದೆ ಹಾಗೂ ಸಫಲತೆಯು ಫಲವಾಗಿದೆ. ಒಂದುವೇಳೆ ಬೀಜವು ಉತ್ತಮವಾಗಿದ್ದರೆ ಫಲವು ದೊರೆಯದಿರಲು ಸಾಧ್ಯವಿಲ್ಲ. ಹಾಗಾದರೆ ಏನು ಮಾಡಬೇಕು. ಸದಾ ಪ್ರಸನ್ನತೆಯ ವ್ಯಕ್ತಿತ್ವದಲ್ಲಿ ಇರಿ. ಪ್ರಸನ್ನಚಿತ್ತರು ತುಂಬಾ ಒಳ್ಳೆಯಅನುಭವ ಮಾಡುವರು. ಸಾಮಾನ್ಯವಾಗಿಯೂ ಯಾರಾದರೂ ಪ್ರಸನ್ನಚಿತ್ತರಾಗಿರುವುದನ್ನು ನೋಡಿದರೆ ಎಷ್ಟು ಹಿತವೆನಿಸುತ್ತದೆ. ಅವರ ಸಂಗದಲ್ಲಿ ಇರುವುದು. ಅವರ ಜೊತೆಯಲ್ಲಿ ಮಾತನಾಡುವುದು. ಕುಳಿತಿರುವುದು ಎಷ್ಟು ಹಿತವೆನಿಸುತ್ತದೆ. ಹಾಗೂ ಯಾರಾದರೂ ಪ್ರಶ್ನಚಿತ್ತರು ಬಂದು ಬಿಟ್ಟರೆ, ಬೇಸರಗೊಂಡು ಬಿಡುವಿರಿ. ಆದ್ದರಿಂದ ಏನು ಲಕ್ಷ್ಯವನ್ನು ಇಟ್ಟುಕೊಳ್ಳ ಬೇಕೆಂದರೆ ಪ್ರಸನ್ನಚಿತ್ತರಾಗಬೇಕು, ಪ್ರಶ್ನಚಿತ್ತರಲ್ಲ.

ಇಂದು ಈ ಸೀಜನ್ನಿನ ಅಂತಿಮ ದಿನವಾಗಿದೆ. ಅಂತಿಮದಲ್ಲಿ ಏನು ಮಾಡಲಾಗುತ್ತದೆ. ಯಾವುದಾದರೂ ಯಜ್ಞವನ್ನು ರಚನೆ ಮಾಡಿದರೆ ಅಂತ್ಯದಲ್ಲಿ ಏನು ಮಾಡುತ್ತಾರೆ? ಸ್ವಾಹಾ ಮಾಡುತ್ತಾರೆ. ಹಾಗಾದರೆ ನೀವು ಏನು ಮಾಡುವಿರಿ? ಪ್ರಶ್ನಚಿತ್ತ ಆಗುವುದನ್ನು ಸ್ವಾಹಾ ಮಾಡಿರಿ. ಇದು ಏಕೆ ಆಗುತ್ತದೆ? ಇದು ಏನು ಆಗುತ್ತದೆ? ಈ ಪ್ರಶ್ನೆಗಳನ್ನು

ಸಮಾಪ್ತಿ ಮಾಡಿರಿ. ಜ್ಞಾನಪೂರ್ಣರಾಗಿರುವುದರಿಂದ ಏಕೆ ಎನ್ನುವ ಪ್ರಶ್ನೆಗಳು ಬೇಡ. ಇಂದಿನಿಂದ ಈ ವ್ಯರ್ಥ ಪ್ರಶ್ನೆಗಳನ್ನು ಸ್ವಾಹಾ ಮಾಡಿರಿ. ಇದರಿಂದ ನಿಮ್ಮ ಸಮಯವು ಉಳಿತಾಯವಾಗುವುದು ಹಾಗೂ ಅನ್ಯರ ಸಮಯವೂ ಉಳಿತಾಯವಾಗುವುದು. ದಾದಿಯರ ಸಮಯವೂ ಇದರಲ್ಲಿ ಉಳಿತಾಯವಾಗುವುದು. ದಾದಿಯರ ಸಮಯವೂ ಇದರಲ್ಲಿ ವ್ಯರ್ಥವಾಗುತ್ತದೆ. ಇದು ಏಕೆ, ಇದೇನು, ಇದು ಹೇಗೆ ಎನ್ನುವ ಪ್ರಶ್ನೆಗಳಲ್ಲಿ ವ್ಯರ್ಥವಾಗುವ ಸಮಯವನ್ನು ಉಳಿತಾಯ ಮಾಡಿರಿ. ಉಳಿತಾಯದ ಖಾತೆಯನ್ನು ಜಮಾ ಮಾಡಿಕೊಳ್ಳಿರಿ, ಆಮೇಲೆ 21 ಜನ್ಮಗಳವರೆಗೆ ಆರಾಮದಿಂದ ಊಟ ಮಾಡಿರಿ. ಪಾನೀಯ ಸೇವಿಸಿರಿ. ಮೋಜು ಮಾಡಿರಿ. ಅಲ್ಲಿ ಜಮಾ ಮಾಡುವ ಅಗತ್ಯವಿರುವುದಿಲ್ಲ. ಹಾಗಾದರೆ ಸ್ವಾಹಾ ಮಾಡಿದಿರಾ? ಅಥವಾ ವಿಚಾರ ಮಾಡುವಿರೋ? ವಿಚಾರ ಮಾಡಬೇಕೇ? ಒಳ್ಳೆಯದು, ವಿಚಾರ ಮಾಡಿರಿ. ನಿಮ್ಮೊಂದಿಗೆ ಕೇಳಿಕೊಳ್ಳಿರಿ ಇದು ಹೇಗೆ ಆಗುವುದು. ಇದನ್ನು ಮಾಡಬೇಕಾಗುವುದೋ ಇಲ್ಲವೋ? ಇದನ್ನು ಒಂದು ನಿಮಿಷದಲ್ಲಿ ವಿಚಾರ ಮಾಡಿಬಿಡಿ. ಪಕ್ಕಾ ಕಾರ್ಯ ಮಾಡಿಬಿಡಿ. ನಿಮ್ಮೊಂದಿಗೆ ಎಷ್ಟು ಪ್ರಶ್ನೆಗಳು ಬೇಕೋ ಅವುಗಳನ್ನು ಒಂದು ನಿಮಿಷದಲ್ಲಿ ಕೇಳಿಕೊಳ್ಳಿರಿ. ಕೇಳಿಕೊಂಡಿದ್ದೀರಾ? ಸ್ವಾಹಾ ಸಹ ಮಾಡಿಬಿಟ್ಟಿದ್ದೀರೋ ಅಥವಾ ಕೇವಲ ಪ್ರಶ್ನೆಯನ್ನು ಕೇಳಿಕೊಂಡಿದ್ದೀರೋ? ಮುಂದೆ ಪ್ರಶ್ನೆಗಳೆಲ್ಲವನ್ನೂ ಸಮಾಪ್ತಿ ಮಾಡಿರಿ. ಸಮಾಪ್ತಿಯಾದವೇ? ಸಮಾಪ್ತಿ ಮಾಡಿದಿರಾ? ಸುಮ್ಮನೆ ಹೌದು ಎಂದು ಹೇಳಿಬಿಡಬೇಡಿರಿ. ಪ್ರಶ್ನಚಿತ್ತರಾಗಿರುವುದು ಅರ್ಥಾತ್ ವ್ಯಾಕುಲರಾಗುವುದು, ಇತರರನ್ನು ವ್ಯಾಕುಲ ಮಾಡುವುದು, ಈ ಬಹಳಕಾಲದ ಅನುಭವವಿದೆಯಲ್ಲವೇ? ಚೆನ್ನಾಗಿ ಅನುಭವವಿದೆಯೇ? ನಿಮ್ಮ ನಿಶ್ಚಯ ಹಾಗೂ ಜನ್ಮಸಿದ್ಧ ಅಧಿಕಾರದ ಸಾಮರ್ಥ್ಯದಲ್ಲಿ ಇದ್ದರೆ ವ್ಯಾಕುಲರಾಗುವುದಿಲ್ಲ. ಯಾವಾಗ ಈ ಸಾಮರ್ಥ್ಯದಿಂದ ದೂರವಾಗುತ್ತೀರೋ ಆಗ ವ್ಯಾಕುಲರಾಗುತ್ತೀರಿ. ಚೆನ್ನಾಗಿ ತಿಳಿದುಕೊಂಡಿದ್ದೀರಾ? ಅಥವಾ ತಿಳಿದುಕೊಂಡೆನು ಎಂದು ಈಗ ಹೇಳಿಬಿಟ್ಟು ವಿದೇಶದಲ್ಲಿ ಹೋದನಂತರ ಕಷ್ಟವಿದೆಯೆಂದು ಹೇಳುವಿರೋ? ಹಾಗೆ ಮಾಡುವುದಿಲ್ಲ ತಾನೇ? ಒಳ್ಳೆಯದು.

**ನಾಲ್ಕೂ ಕಡೆಯ ಸರ್ವ ಪ್ರಶ್ನಚಿತ್ತದಿಂದ ಪರಿವರ್ತನೆಯಾಗುವ ಸದಾ ಪ್ರಸನ್ನಚಿತ್ರದ ಪರ್ಸನಾಲಿಟಿ (ವ್ಯಕ್ತಿತ್ವ) ಉಳ್ಳ ಶ್ರೇಷ್ಠ ಆತ್ಮರು. ಸದಾ ತಮ್ಮ ವಿಜಯ ಹಾಗೂ ಜನ್ಮಸಿದ್ಧ ಅಧಿಕಾರದ ಸ್ಮೃತಿಯಲ್ಲಿರುವ ಸ್ಮೃತಿಸ್ವರೂಪ ವಿಶೇಷ ಆತ್ಮರು, ಸದಾ ಸಫಲ ಮಾಡಿಕೊಳ್ಳುವುದರಿಂದ ಸಹಜವಾಗಿ ಸಫಲತೆಯ ಅನುಭವ ಮಾಡುವ ತಂದೆಯ ಸಮೀಪ ಆತ್ಮರಿಗೆ ಬಾಪ್ ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

ಈದಿನ ಬಾಪ್‌ದದಾರವರ ಮುಂದೆ 10 ವರ್ಷದಿಂದ ಜ್ಞಾನದಲ್ಲಿ ನಡೆಯುತ್ತಾ ಇರುವವರು ಕುಳಿತುಕೊಂಡಿದ್ದಾರೆ. ಇವರೆಲ್ಲರೂ 10 ವರ್ಷದವರು ಕುಳಿತುಕೊಂಡಿದ್ದಾರೆ. ಸಮಾರಂಭವನ್ನು ಆಚರಣೆ ಮಾಡಿದ್ದಿರಾ? ಬಾಪ್‌ದಾದಾರವರು 10 ವರ್ಷದ ಮಹಾವೀರ ಹಾಗೂ ಮಹಾವೀರಣೀ ಮಕ್ಕಳನ್ನು ನೋಡಿ ಹರ್ಷಿತರಾಗುತ್ತಿದ್ದಾರೆ ಹಾಗೂ ಶುಭಾಶಯಗಳನ್ನು ನೀಡುತ್ತಿದ್ದಾರೆ, ವರದಾನ ಕೊಡುತ್ತಿದ್ದಾರೆ - "ಸದಾ ನಿರ್ವಿಘ್ನ ಭವ". ಹೀಗೆ 10 ವರ್ಷಗಳು ಧೈರ್ಯವಿಟ್ಟುಕೊಂಡು ತಂದೆಯ ಜೊತೆ ಹಾಗೂ ತಂದೆಯ ಕೈನ ಆಧಾರದಿಂದ 10 ವರ್ಷಗಳು ಶಕ್ತಿಶಾಲಿಯಾಗಿ

ಇದ್ದೀರೋ ಹಾಗೆಯೇ ಸದಾ ಧೈರ್ಯವನ್ನು ಸಾಥಿ ಮಾಡಿಕೊಂಡು ಇಟ್ಟುಕೊಳ್ಳಿರಿ. ಧೈರ್ಯವನ್ನು ಕಳೆದುಕೊಳ್ಳಬೇಡಿರಿ. ಎಲ್ಲಿ ಧೈರ್ಯವಿದೆಯೋ ಅಲ್ಲಿ ತಂದೆಯು ಇದ್ದೇ ಇದ್ದಾರೆ. ಆದ್ದರಿಂದ ಬಾಪ್‌ದಾದಾರವರಿಗೆ ಏನು ಖುಷಿಯಿದೆಯೆಂದರೆ, ಡಬಲ್ ವಿದೇಶೀಯರು ಭಿನ್ನ ಭಿನ್ನ ಪ್ರಕಾರದ ಆಕರ್ಷಣಾ ಸ್ಥಳದಲ್ಲಿ ಇರುತ್ತಿದ್ದರೂ ಭಿನ್ನ ಧರ್ಮ ಹಾಗೂ ಭಿನ್ನ ಪ್ರಕಾರದ ಸಂಸ್ಕೃತಿಯಾಗಿದ್ದರೂ ಸಹ ಬ್ರಾಹ್ಮಣ ಸಂಸ್ಕೃತಿಯಲ್ಲಿ ನಡೆಯುತ್ತಾ ಇದ್ದಾರೆ. ಈ ತುಂಬಾ ಧೈರ್ಯದ ಸ್ಯಾಂಪಲ್ (ಮಾದರಿಯನ್ನು) ತೋರಿಸಿದ್ದೀರಿ. ನಿಮ್ಮ ಸ್ಯಾಂಪಲನ್ನು ನೋಡಿ ಅನೇಕ ಆತ್ಮರು ಲಾಭ ಹೊಂದುವರು. ಆದ್ದರಿಂದ ಧೈರ್ಯದ ಸಲುವಾಗಿಯೂ ಶುಭಾಶಯಗಳು ಹಾಗೂ ಧೈರ್ಯದ ಮೂಲಕ ಸೇವೆ ಮಾಡಿದ್ದಕ್ಕಾಗಿಯೂ ಶುಭಾಶಯಗಳು. ನಿಮ್ಮೆಲ್ಲರನ್ನೂ ನೋಡಿ ಬಾಪ್‌ದಾದಾರಿಗೂ ಸಹ ಖುಷಿಯಾಗಿದೆ. ಒಳ್ಳೆಯದು -

10 ವರ್ಷದವರು ಎಲ್ಲೆಲ್ಲಿಯವರು ಇದ್ದಾರೆ. ಕೈ ಎತ್ತಿರಿ. (ಬಾಪ್ ದಾದಾರು ಎಲ್ಲರಿಂದಲೂ ಪ್ರತ್ಯೇಕ ಪ್ರತ್ಯೇಕವಾಗಿ ಕೈ ಎತ್ತಿಸಿ ಮಿಲನ ಮಾಡುತ್ತಿದ್ದಾರೆ) ಯೂರೋಪ್‌ನವರು ಕೈ ಎತ್ತಿರಿ. ಆಸ್ಟ್ರೇಲಿಯಾದವರ ಶುಭ ಸಮಾಚಾರವನ್ನು ಕೇಳಿದೆವು. ಧೈರ್ಯ ಇಟ್ಟುಕೊಂಡಿದ್ದಾರೆ. ಸೇವೆಯ ಪ್ಲಾನ್ ಸಹ ಉತ್ತಮವಾದುದನ್ನು ತಯಾರು ಮಾಡಿದ್ದಾರೆ ಹಾಗೂ ಜೊತೆ ಜೊತೆಯಲ್ಲಿ ಸ್ವೀಟ್ ಹೌಸನ್ನೂ ಸಹ ತೆಗೆದುಕೊಳ್ಳುತ್ತಿದ್ದಾರೆ. ಆಸ್ಟ್ರೇಲಿಯಾದ ಭುಜಗಳು ಎಷ್ಟಿವೆ? (13) ಯಾರು ಆಸ್ಟ್ರೇಲಿಯಾದ ಸಂಬಂಧದಲ್ಲಿ ಇದ್ದೀರೋ ಏಷ್ಯಾದವರು ಕೈ ಎತ್ತಿರಿ. 13 ಭುಜಗಳಿವೆ. ಭುಜಗಳು ಏನು ಮಾಡುವವು? ಭುಜವು ಏನು ಮಾಡುತ್ತದೆ? ಸಹಯೋಗ ನೀಡುತ್ತದೆ. ಹಾಗಾದರೆ ಈ 13 ಭುಜಗಳು ಏನು ಮಾಡುವರು? ಕೇವಲ ಕೇಳಿ, ನೋಡಿ ಖುಷಿಯಾಗುವರೇ? ಇಲ್ಲ. ಎಲ್ಲಾ ಭುಜಗಳೂ ಯಥಾ ಶಕ್ತಿ ಆಸ್ಟ್ರೇಲಿಯಾ ನಿವಾಸಿಗಳ ಸೇವೆಯ ಪ್ರತಿಯಾಗಿ ಕಾಣಿಕೆ ಕೊಡಿ. ಪಾಲನೆ ತೆಗೆದುಕೊಳ್ಳುತ್ತೀರಲ್ಲವೇ ಹಾಗೆ ಪಾಲನೆಯ ಪ್ರತಿಯಾಗಿ ಕಾಣಿಕೆ ಸಲ್ಲಿಸುವುದೂ ಒಂದು ಕರ್ತವ್ಯ ಆಗಿದೆ. ತಿಳಿದುಕೊಂಡಿದ್ದೀರಾ. ಭುಜಗಳು ತಿಳಿದುಕೊಂಡಿರಾ. ಉತ್ತಮರಾಗಿದ್ದಾರೆ. ಏಷ್ಯಾದ ತಂಡದವರು ತುಂಬಾ ಉತ್ತಮರಾಗಿದ್ದಾರೆ. ಏಷ್ಯಾದವರಂತೂ ಸಮೀಪವೂ ಆಗಿದ್ದಾರಲ್ಲವೇ, ಇಂಡಿಯಾ ಸಹ ಏಷ್ಯಾದಲ್ಲಿ ಬರುತ್ತದೆ. ಏಷ್ಯಾದಲ್ಲಿ ಕೇಂದ್ರಸ್ಥಾನವಾಗಿದೆ (ಹೆಡ್ ಕ್ವಾರ್ಟರ್). ಆದ್ದರಿಂದ ಏಷ್ಯಾದವರಿಗೆ ಏನು ವಿಶೇಷ ನಶೆಯಿರಬೇಕೆಂದರೆ, ಏಷ್ಯಾದಲ್ಲಿ ಬಾಪ್ ದಾದಾರರವರು ಬರುತ್ತಾರೆಂದು. ಲಂಡನ್‌ನಲ್ಲಿಯೂ ಬರುವುದಿಲ್ಲ. ಅಮೇರಿಕಾದಲ್ಲಿಯೂ ಬರುವುದಿಲ್ಲ. ಬಾಪ್‌ದಾದಾರಿಗೆ ಏಷ್ಯಾ ಪ್ರಿಯವಾದ ಖಂಡವಾಗಿದೆ. ಯೂರೋಪಿನ ಮಹಿಮೆ ತನ್ನದು ಇದೆ ಹಾಗೂ ಏಷ್ಯಾದ ಮಹಿಮೆಯೂ ತನ್ನದೇ ಬೇರೆ ಇದೆ. ಯೂರೋಪ್ ಸರ್ವ ಡಬಲ್ ವಿದೇಶೀಯರ ಬುನಾದಿಯ ಸ್ಥಾನವಾಗಿದೆ. ಡಬಲ್ ವಿದೇಶೀಯರ ಸೇವೆಯ ಪ್ರಾರಂಭವು ಯೂರೋಪ್‌ನಲ್ಲಿ ಆಯಿತು. ಯೂರೋಪ್ ಎಂದಾದರೂ ಹೇಳಿರಿ ಯು.ಕೆ. ಎಂದಾದರೂ ಹೇಳಿರಿ. ಆಯಿತು. ಒಳ್ಳೆಯದು. ಆದರೆ ಬಾಪ್‌ದಾದರು ಬರುವುದು ಏಷ್ಯಾದಲ್ಲಿ

*ನಾರ್ಥ್ (ಉತ್ತರ) ಅಮೇರಿಕಾ, ಸೌತ್ (ದಕ್ಷಿಣ) ಅಮೇರಿಕಾದವರು ಕೈ ಎತ್ತಿರಿ. ಕೇವಲ 10 ವರ್ಷದವರು ಕೈ ಎತ್ತಿರಿ. ಆಫ್ರಿಕಾದವರು ಕೈ ಎತ್ತಿರಿ.*

ಇನ್ನೂ ಅನೇಕರು ಇರಬಹುದು. ಆದರೆ ಈ ತಂಡದವರಿಗೆ ಅವಕಾಶವು ದೊರೆತಿದೆ. ಇದೂ ಸಹ ಅದೃಷ್ಟವಾಗಿದೆ. ಒಳ್ಳೆಯದಾಯಿತು. ಪಾಂಡವರೂ ಸಾಕಷ್ಟಿದ್ದಾರೆ. 10 ವರ್ಷದವರಿಗೆ ಬಾಪ್‌ದಾದಾ ಹಾಗೂ ಸರ್ವ ಪರಿವಾರದ ಕಡೆಯಿಂದ ಒಳ್ಳೆಯದು- ಪದಮದಷ್ಟು ಶುಭಾಶಯಗಳು ಸಲ್ಲುತ್ತವೆ. ಇನ್ನು ಮುಂದಿನ ಸೀಜನ್ ಏನು ಕಾರ್ಯಕ್ರಮ ಇರುವುದು ಎನ್ನುವ ಪ್ರಶ್ನೆಯಿದೆ. ಈ ಪ್ರಶ್ನೆಯನ್ನು ಕೇಳಲು ಅಡ್ಡಿಯಿಲ್ಲ. ಇದು ಉಪಯುಕ್ತವಾದ ಪ್ರಶ್ನೆಯಾಗಿದೆ. ನಿರರ್ಥಕವಾದ ಪ್ರಶ್ನೆಯಲ್ಲ. ವಿಶ್ವನಾಟಕದ ಅನುಸಾರವಾಗಿ ಬಾಪ್‌ದಾದಾರ ಪ್ಲಾನ್ ಏನಾಗಿದೆಯೆಂದರೆ ಈ ವರ್ಷವು ಡೈಮಂಡ್ ಜೂಬ್ಲಿಯ ವರ್ಷವಾಗಿದೆ ಹಾಗೂ ಡೈಮಂಡ್ ಜೂಬ್ಲಿಯ ಸೇವೆಯ ಅಕ್ಕರೆ-ಉತ್ಸಾಹವು ನಾಲ್ಕೂ ಕಡೆ ಹಾಗೂ ದೇಶ ವಿದೇಶಗಳಲ್ಲಿ ಚೆನ್ನಾಗಿದೆ ಹಾಗೂ ಚೆನ್ನಾಗಿ ಇರುವುದು. ಚೆನ್ನಾಗಿ ಇದ್ದೇ ಇರುವುದು. ಆದ್ದರಿಂದ ಈ ವರ್ಷ ಎಷ್ಟು ಮನಃಪೂರ್ತಿ ಎಷ್ಟು ಸೇವೆ ಮಾಡಲು ಬಯಸಿದರೆ ಅಷ್ಟೂ ಮಾಡಿರಿ. ಈ ವರ್ಷದಲ್ಲಿ ಭಾರತದಲ್ಲಿ ಅಥವಾ ವಿದೇಶದಲ್ಲಿ ಅನೇಕ ಮಕ್ಕಳಿಗೆ ಯತಾಶಕ್ತಿ ದೊಡ್ಡ ದೊಡ್ಡ ಪ್ರೋಗ್ರಾಂ ಮಾಡಬೇಕೆಂಬ ಅಕ್ಕರೆ ಉತ್ಸಾಹವಿದೆ. ಹಾಗೂ ಯಾವಾಗ ದೊಡ್ಡ ಪ್ರೋಗ್ರಾಂ ಮಾಡುತ್ತಾರೋ ಆಗ ದೊಡ್ಡವರನ್ನು ಕರೆಯುತ್ತಾರೆ. ಆದ್ದರಿಂದ ಬಾಪ್‌ದಾದಾರ ಪ್ಲಾನ್ (ಯೋಜನೆಯು) ಏನಿದೆಯೆಂದರೆ ಈ ವರ್ಷದಲ್ಲಿ ಸೇವಾಕೇಂದ್ರದ ಕಟ್ಟಡದ ಉದ್ಘಾಟನೆಗೆ ದಾದಿಯು ಬರಬೇಕೆಂದು ಬಯಸುವುದು ಸರಿಯಲ್ಲ. ಆದರೆ ಡೈಮಂಡ್ ಜೂಬ್ಲಿಗೆ ಸಂಬಂಧಿತವಾದ ಯೋಗ್ಯವಾದ ಪ್ರೋಗ್ರಾಂಗಳು ಎಲ್ಲಿಯಾದರೂ ಇದ್ದರೆ ಅಲ್ಲಿ ದಾದಿಯರು ಹೋಗಬಹುದು. ಆದರೆ.... ಆದರೆ ಎನ್ನುವುದು ಇದೆ. ದಾದಿಯರ ಆರೋಗ್ಯದೊಂದಿಗೆ ಎಲ್ಲರ ಪ್ರೀತಿಯಿದೆ. ಇದೆಯೇ? ಅಥವಾ ಕೇವಲ ಸೇವೆಯೊಂದಿಗೆ ಪ್ರತಿಯಿದೆಯೋ? ಸೇವೆಯೊಂದಿಗೆ ಮಾತ್ರವೇ ಪ್ರೀತಿಯಿದೆಯೋ ಅಥವಾ ಅವರ ಆರೋಗ್ಯದೊಂದಿಗೂ ಪ್ರೀತಿಯಿದೆಯೋ? ಎರಡರೊಂದಿಗೂ ಪ್ರೀತಿಯಿದೆಯಲ್ಲವೇ. ಆದ್ದರಿಂದ ಸ್ವಯಂ ನೀವೂ ಸಹ ವಿಚಾರಮಾಡಿ ಅರಿತುಕೊಂಡು ಆಮಂತ್ರಣ ನೀಡಿರಿ. ಬರಲೇಬೇಕೆಂದೂ ಇಲ್ಲದಿದ್ದರೆ ನಮಗೆ ಅಸಮಾಧಾನವಾಗಿ ಬಿಡುತ್ತದೆಯೆಂದೂ ಒತ್ತಾಯ ಮಾಡಬಾರದು. ಅಳಲು ಪ್ರಾರಂಭ ಮಾಡಿಬಿಡಬೇಡಿರಿ. ನೋಡಿರಿ ಒಂದು ಕಡೆ ಯಜ್ಞದ, ಮನೆಯ ಮಾಲಿಕರು ಎಲ್ಲರೂ ಆಗಿದ್ದೀರಿ. ನಾನಂತೂ ಸಣ್ಣವರಾಗಿದ್ದೇವೆ ಎಂದು ಹೇಳುವುದು ಸರಿಯಲ್ಲ. ನಮಗೇನು ಗೊತ್ತಿದೆ, ನಾವು ಮನೆಯಲ್ಲಿದ್ದೆವು ಎಂದು ಹೇಳಬೇಡಿರಿ. ವಿಶ್ವದ ಹೊಣೆಗಾರಿಕೆ ಇರುವವರಾಗಿದ್ದೀರಿ. ನಿನ್ನೆ ಕಿರೀಟವನ್ನು ಧರಿಸಿದ್ದಿರಲ್ಲವೇ? ಅದು ಜವಾಬ್ದಾರಿಯ ಕಿರೀಟವಾಗಿತ್ತಲ್ಲವೇ. ಒಳ್ಳೆಯದು - ಯಾರು ಯಾರು ಕಿರೀಟ ಧರಿಸಿದ್ದೀರಿ ಕೈ ಎತ್ತಿರಿ. ಹಾಗಾದರೆ ಯಾವುದರ ಕಿರೀಟ ಧರಿಸಿದ್ದಿರಿ? ರಟ್ಟಿನ ಕಿರೀಟವನ್ನೇ? ಜವಾಬ್ದಾರಿಯ ಕಿರೀಟ ಧರಿಸಿದ್ದಿರಿ. ಹಾಗೆಯೇ ಯಾವುದಾದರೂ ಪ್ರೋಗ್ರಾಂ ತಯಾರು ಮಾಡಿದರೆ, ಯಜ್ಞವನ್ನೂ ನೋಡಿರಿ. ಏಕೆಂದರೆ ಈದಿನ ಮಧುಬನವು ಏಕೆ ಆಕರ್ಷಿತರನ್ನಾಗಿ ಮಾಡುತ್ತದೆ? ಏಕೆಂದರೆ ಬ್ರಹ್ಮಾಬಾಬಾರ ತಪಸ್ಸಿನ, ಅವರ ಸ್ಥಿತಿಯ ಸ್ಥಾನವಾಗಿದೆ. ಆದ್ದರಿಂದ ಯಾರು ನಿಮಿತ್ತ ಹಿರಿಯ ದಾದಿಯರಿದ್ದಾರೋ ಅವರು ಯಜ್ಞದ ವಾತಾವರಣ, ಯಜ್ಞದ ಕಾರುಬಾರನ್ನೂ ಸಹ ಮೇಲ್ವಿಚಾರಣೆ ಮಾಡಬೇಕಾಗುತ್ತದೆ. ಹಾಗೂ ನೀವೂ ಸಹ ಎಲ್ಲರೂ

ಜವಾಬ್ದಾರರಾಗಿದ್ದೀರಿ. ಯಾರು ಯಾರು ಮಧುಬನದಲ್ಲಿ ಬರುತ್ತಾರೋ ಅವರು ವಾತಾವರಣದಿಂದ ಖುಷಿಯಾಗಿ ಹೋಗುತ್ತಾರೆ. ಅದರ ಕಾರಣವು ಏನಾಗಿದೆ ಹಿರಿಯರ ಸ್ಥಿತಿಯ ಪ್ರಭಾವವು ಸ್ಥಾನದ ಮೇಲೆ ಆಗುತ್ತದೆ. ಆದ್ದರಿಂದ ಇದನ್ನೂ ಗಮನಿಸಿರಿ. ಏಕೆಂದರೆ ಯಜ್ಞಸ್ಥಾನ (ಮಧುಬನದ) ವಾತಾವರಣವು ನಾಲ್ಕೂ ಕಡೆ ಹರಡುತ್ತದೆ. ನಿಮ್ಮೆಲ್ಲರಿಗೂ ಶಕ್ತಿಯು ಮಧುಬನದ ಸ್ಥಾನದಿಂದಲೇ ದೊರೆಯುತ್ತದೆ. ಆದ್ದರಿಂದ ಮಧುಬನದ ವಾತಾವರಣ, ಕಾರುಬಾರು, ಸೇವೆಗಳು, ಜೊತೆ ಜೊತೆಯಲ್ಲಿ ದಾದಿಯರು ಆರೋಗ್ಯವನ್ನೂ ಗಮನಿಸಿ ಆಮೇಲೆ ಪ್ರೋಗ್ರಾಂ ತಯಾರು ಮಾಡಿರಿ. ಯಾವಾಗ ನೀವು ಬನ್ನಿರೆಂದು ಆಮಂತ್ರಣ ನೀಡುತ್ತೀರೋ ಹಾಗೂ ಯಾರದಾದರೂ ಪ್ರೋಗ್ರಾಂ ರದ್ದಾಗುತ್ತದೆಯೋ ಆಗ ಸ್ಥಿತಿಗಳಲ್ಲಿಯೂ ಅಲ್ಪಸ್ವಲ್ಪ ವ್ಯತ್ಯಾಸವಾಗುತ್ತದೆ. ಆದ್ದರಿಂದ ಮುಂಚಿತವಾಗಿಯೇ ವಿಚಾರಮಾಡಿ ತಿಳಿದುಕೊಂಡು ಜ್ಞಾನಪೂರ್ಣರಾಗಿ, ಜವಾಬ್ದಾರಿಯುಳ್ಳವರಾಗಿ ಆಮೇಲೆ ಪ್ರೋಗ್ರಾಂ ತಯಾರು ಮಾಡಿರಿ ತಿಳಿಯಿತೇ. ಇದಕ್ಕಾಗಿ ಬಾಪ್ ದಾದಾರು ಈ ಸೀಜನ್ ಪೂರ್ತಿ ಸೇವೆಯ ಸಲುವಾಗಿ ಅನುಮತಿ ನೀಡುತ್ತಿದ್ದೇವೆ ಹಾಗೂ ಬಾಪ್ ದಾದಾರ ಸೀಜನ್ ಪೂರ್ತಿ ಸೇವೆಯ ಸಲುವಾಗಿ ಅನುಮತಿ ನೀಡುತ್ತಿದ್ದೇವೆ ಹಾಗೂ ಬಾಪ್ ದಾದಾರ ಸೀಜನ್ ಮತ್ತು ಹೊರಗಡೆಯ ಸೇವೆಯ ಆಮಂತ್ರಣ ಇವೆರಡರಲ್ಲಿ ಯಾವುದರಲ್ಲಿ ಭಾಗವಹಿಸಬೇಕೆಂಬ ಆತಂಕವುಂಟಾಗುತ್ತದೆಯಲ್ಲವೇ. ಆದ್ದರಿಂದ ಈ ಸೀಜನ್ನಿನಲ್ಲಿ ಬಾಪ್‌ದಾದಾರು ಒಂದು ವೇಳೆ ಡಿಸೆಂಬರ್ ಮಾಸದಲ್ಲಿ ಕೆಳಗಿನ ಶಾಂತಿವನದ ಭವನವು ತಯಾರಾಗಿ ಬಿಟ್ಟರೆ ಹಾಗೂ ಉದ್ಘಾಟನೆಯಾಗಿಯೇ ಬಿಡುವುದರಿಂದ ಡಿಸೆಂಬರ್‌ನಲ್ಲಿ ವಿದೇಶೀಯರು ಅದರ ಹಾಗೂ ಭಾರತೀಯರು ಇಬ್ಬರದೂ ಸಂಘಟನೆಯ ಪ್ರೋಗ್ರಾಂ ಅನ್ನು ಶಾಂತಿವನದಲ್ಲಿ ಪ್ರಾರಂಭ ಮಾಡುವೆವು. ವಿದೇಶೀಯರು ಮೇಲುಗಡೆ ಇರಲಿ, ಭಾರತೀಯರು ಕೆಳಗಡೆ ಇರಲಿ. ಡಬಲ್ ಚಾನ್ಸ್ (ಎರಡು ಅವಕಾಶವು) ದೊರೆಯುತ್ತದೆ. ನೀವು ಡಬಲ್ ವಿದೇಶೀಯರು ಕೆಳಗಡೆ ಇರುವಿರಾ? ನೆಲದಮೇಲೆ ಮಲಗಬೇಕಾಗುತ್ತದೆ. ನಿಮ್ಮ ಬಟ್ಟೆಗಳ ಹೋಲ್ಡಾಲ್ ಅನ್ನು ತಲೆದಿಂಬಾಗಿ ಮಾಡಿಕೊಳ್ಳಿರಿ. ಸ್ಥಳಾವಕಾಶದ ಅಗತ್ಯವಿದೆಯಲ್ಲವೇ. ಹೀಗ ಬಾಪ್‌ದಾದಾರು ಈ ಸೀಜನ್ನಿನಲ್ಲಿ ಅರ್ಥಾತ್ ಏನು ಪ್ರಾರಂಭ ಆಗಲಿರುವ ಮುಂದಿನ ಸೀಜನ್ನಿನಲ್ಲಿ ಡಿಸೆಂಬರ್‌ನಲ್ಲಿ ಬರುವೆವು. ಆಮೇಲೆ ಜನವರಿ 18ನೆಯ ದಿನಾಂಕದಂದು ಭಾರತೀಯರ ಸಲುವಾಗಿ ಹಾಗೂ ಮೂರನೆಯ ಮಿಲನ ಮಾಡಲು ವಿದೇಶೀಯರ ಸಲುವಾಗಿ ಶಿವರಾತ್ರಿಯ ದಿನ ಬರುವೆವು. ಹಾಗೂ ನಾಲ್ಕನೆಯದನ್ನು ಒಂದುವೇಳೆ ವ್ಯವಸ್ಥೆಯು ಸಮರ್ಪಕವಾಗಿದ್ದರೆ ಶಿವರಾತ್ರಿಯ ನಂತರ ಏಪ್ರಿಲ್ ಮಾಸದ ಪ್ರಾರಂಭದಲ್ಲಿ ಪುನಃ ಒಂದು ಮೇಳವನ್ನು ಇಟ್ಟುಕೊಳ್ಳುವೆವು. ಅದರಲ್ಲಿ ವಿದೇಶೀಯರೂ ಇರುವರು ಹಾಗೂ ಭಾರತೀಯರೂ ಇರುವರು. ಹೀಗೆ ಮುಂದಿನ ಸೀಜನ್ನಿನ ಪ್ಲಾನ್ ಇದಾಗಿದೆ. ಯಾರು ಎಷ್ಟು ಸೇವೆ ಮಾಡಬೇಕೆಂದಿದ್ದೀರೋ ಅದನ್ನು ಮನಃಪೂರ್ವಕವಾಗಿ ಮಾಡಿರಿ. ಹಾಗೂ ಯೋಗ್ಯವಾದ ಕಾರ್ಯಕ್ರಮದಲ್ಲಿ ಭಾಗವಹಿಸಲು ಗಮನ ಇಟ್ಟುಕೊಂಡು ದಾದಿಯರೂ ಸಹ ಸುತ್ತಿಕೊಂಡು ಬರಲಿ. ಆದರೆ ಮೊದಲು ಆರೋಗ್ಯಕ್ಕೆ ಆದ್ಯತೆ ನೀಡಬೇಕು. ಆಮೇಲೆ ಸೇವೆ ಮಾಡಬಹುದು. ಅಸ್ವಸ್ಥತೆಯಿದ್ದರೂ ನಿರ್ವಾಹವಿಲ್ಲದೆ ಮಾಡಬೇಡಿರಿ. ಈಗ ಸಮಯವು ಸಾಕಷ್ಟು ಇದೆ. ಆದ್ದರಿಂದ ಸಮಯದ ಅನುಸಾರವಾಗಿ ಸೇವೆಗಾಗಿ ಅನ್ಯ ಸ್ಥಾನಗಳಲ್ಲಿ ಸುತ್ತಿಕೊಂಡು ಬನ್ನಿರಿ ಹಾಗೂ ಎರಡನೆಯದಾಗಿ ಬ್ರಾಹ್ಮಣರ ರಿಫ್ರೆಷ್ ಮೆಂಟ್ (ನವಹುರುಪು ತುಂಬುವುದನ್ನು) ಮಾಡಿರಿ. ಕರ್ಮಾತೀತ ಆಗುವ ಅಭ್ಯಾಸ ಮಾಡಿರಿ, ಅಶರೀರಿಯಾಗುವ ಅಭ್ಯಾಸ ಮಾಡಿರಿ ಎಂದು ಬಾಪ್‌ದಾದಾರು ಏನು ಹೇಳಿದ್ದೆವೋ ಅದಕ್ಕಾಗಿ ಬ್ರಾಹ್ಮಣರ

ಸಂಘಟನೆಯನ್ನು ತಂಡಗಳಲ್ಲಿ ಇಲ್ಲಿ ವ್ಯವಸ್ಥೆ ಮಾಡಬಹುದು. ಪ್ರತಿಯೊಂದು ಮಾಸದ ಬೇರೆ ಬೇರೆ ಪ್ರೋಗ್ರಾಂ ತಯಾರು ಮಾಡಿರಿ. ಇದರಿಂದ ಸೇವೆಯೂ ಆಗಬೇಕು ಹಾಗೂ ಬ್ರಾಹ್ಮಣರ ರಿಫ್ರೆಷ್ ಮೆಂಟ್ ಸಹ ಆಗಬೇಕು. ಆದರೆ ಒಂದೇ ವರ್ಷದಲ್ಲಿ ಒತ್ತಾಯಕ್ಕಾಗಿ ವಿದೇಶದಲ್ಲಿ ಹೋಗಲೇಬೇಕೆಂಬ ವಿವಶತೆಗೆ ಒಳಗಾಗಬೇಡಿರಿ. ಶಾಂತರಾಗಿ ಪ್ರೋಗ್ರಾಂ ತಯಾರುಮಾಡಿರಿ. ಈಗ ಮುಂದಿನ ಸಮಯವೂ ತುಂಬಾ ಇದೆ. ಆದ್ದರಿಂದ ಈ ವರ್ಷದಲ್ಲಿ ಅಥವಾ ಸೀಜನ್ನಿನಲ್ಲಿ ಒಂದು ಪರ್ಯಟನವನ್ನು ವಿದೇಶದ್ದನ್ನು ಆಮೇಲೆ ಇನ್ನೊಂದು ಸಮಯದಲ್ಲಿ ಇನ್ನೊಂದು ಪರ್ಯಟನವನ್ನು ವ್ಯವಸ್ಥೆ ಮಾಡಿರಿ. ಇದರಿಂದ ಸ್ನೇಹದಿಂದ ಆರಾಮದಿಂದ ಸೇವೆ ಹಾಗೂ ದಾದಿಯರ ಆರೋಗ್ಯದ ಬ್ಯಾಲೆನ್ಸ್ (ಸಮತೋಲನ) ಇಟ್ಟುಕೊಳ್ಳಿರಿ ತಿಳಿಯಿತೇ. ಮುಂದಿನ ಸೀಜನ್ನಿನ ಪ್ಲಾನ್ ಇದೇ ಆಗಿದೆ. ಆಮೇಲೆ ಮುಂದೆ ನೋಡುವೆವು. ವರ್ತಮಾನ ಸಮಯದಲ್ಲಿ ದೇಶದಲ್ಲಾಗಲೀ, ವಿದೇಶದಲ್ಲಾಗಲೀ ಏರುಪೇರು ಆಗಲಿದೆ. ಏಕೆಂದರೆ ವರ್ತಮಾನ ಸಮಯದಲ್ಲಿ ಎಷ್ಟು ಸೇವೆಯ ಅವಕಾಶವನ್ನು  ಉಪಯೋಗಿಸಿಕೊಳ್ಳಲು ಸಾಧ್ಯವಿದೆಯೋ ಅಷ್ಟು ಉಪಯೋಗ ಮಾಡಿಕೊಳ್ಳಿರಿ. ತಿಳಿಯಿತೇ (ಡ್ರಿಲ್).

ಒಂದು ಸೆಕೆಂಡಿನಲ್ಲಿ ಅಶರೀರಿಯಾಗುವ ಪಾಠವು ಪಕ್ಕಾ ಆಗಿದೆಯೇ? ಈಗ ತಾನೇ ವಿಸ್ತಾರದಲ್ಲಿ ಹೋಗಿ ಇದೀಗಲೇ ಸಾರದಲ್ಲಿ ಸ್ಥಿತರಾಗಿ ಬಿಡಿ. (ಬಾಪ್‌ದಾದಾರು ಡ್ರಿಲ್ ಮಾಡಿಸಿದರು) ಒಳ್ಳೆಯದು ಈ ಅಭ್ಯಾಸವನ್ನು ಸದಾ ಜೊತೆಯಲ್ಲಿ ಇಟ್ಟುಕೊಳ್ಳಿರಿ.

**ದಾದಿಯರೊಂದಿಗೆ:** ಬಾಪ್‌ದಾದಾರಿಗೆ ಪರಿವಾರದ ಕಿರೀಟಪ್ರಾಯರಾದ ನಿಮಿತ್ತ ಆತ್ಮರ ಸಲುವಾಗಿ "ಸದಾ ಜೀವಿಸಿರಿ, ಹಾರುತ್ತಾ ಇರಿ ಹಾಗೂ ಹಾರಿಸುತ್ತಾ ಇರಿ" ಎನ್ನುವ ಸಂಕಲ್ಪವು ಇರುತ್ತದೆ. ನಿಮ್ಮ ಯೋಗದ ತಪಸ್ಸಿನ ಶಕ್ತಿಯಿಂದ ಶರೀರಗಳನ್ನು ನಡೆಸುವುದೇನೋ ನಡೆಸುತ್ತಾ ಇದ್ದೀರಿ. ಆದರೆ ನಿಮಗಿಂತಲೂ ಅಧಿಕವಾಗಿ ಬಾಪ್‌ದಾದಾರಿಗೆ ಕಾಳಜಿಯಿರುತ್ತದೆ. ಆದ್ದರಿಂದ ಸಮಯದ ಅನುಸಾರವಾಗಿ ತೀವ್ರಗತಿಯಿಂದ ಸುತ್ತಬೇಡಿರಿ. ಸುಖವಾಗಿ ಹೋಗಿರಿ ಹಾಗೂ ಬನ್ನಿರಿ. ಏಕೆಂದರೆ ಪ್ರಪಂಚದ ಪರಿಸ್ಥಿತಿಗಳೂ ಸಹ ತೀವ್ರಗತಿಯಿಂದ ಬದಲಾವಣೆಯಾಗುತ್ತಾ ಇವೆ. ಆದ್ದರಿಂದ ಸೇವೆಯನ್ನು ಮಾಡಬೇಡಿರೆಂದು ಬಾಪ್ ದಾದಾರು ಹೇಳುವುದಿಲ್ಲ. ಆದರೆ ಬ್ಯಾಲೆನ್ಸ್ ಇಟ್ಟುಕೊಳ್ಳಿರಿ. ಎಲ್ಲರ ಪ್ರಾಣಗಳೂ ನಿಮ್ಮ ಶರೀರಗಳಲ್ಲಿ ಇವೆ. ಶರೀರವು ಸರಿಯಾಗಿದ್ದರೆ ಸೇವೆಯೂ ಚೆನ್ನಾಗಿ ಆಗುತ್ತಾ ಇರುವುದು. ಆದ್ದರಿಂದ ಸೇವೆಯನ್ನು ಚೆನ್ನಾಗಿ ಮಾಡಿರಿ. ಆದರೆ ಜಾಸ್ತಿ ಘಾಸಿ ಮಾಡಿಕೊಳ್ಳಬೇಡಿರಿ. ಸ್ವಲ್ಪ ಶರೀರವನ್ನು ಮುಂದಕ್ಕೆ ದೂಡಿರಿ. ಜಾಸ್ತಿ ಮುಂದೆ ನೂಕುವುದರಿಂದ ಏನಾಗುತ್ತದೆ. ಬ್ಯಾಟರಿಯು ಸ್ಲೋ(ನಿಧಾನ) ಆಗಿಬಿಡುತ್ತದೆ. ಆದ್ದರಿಂದ ಈಗಿನಿಂದ ಬ್ಯಾಲೆನ್ಸ್ ಇಟ್ಟುಕೊಳ್ಳುವುದು ಅವಶ್ಯಕವಾಗಿದೆ. ಈ ವರ್ಷವಂತೂ ಮಾಡಿಬಿಡೋಣ. ಮುಂದಿನ ವರ್ಷ ಏನಾಗುತ್ತದೆಯೋ ಗೊತ್ತಿಲ್ಲ ಎಂದು ಯೋಚಿಸಬೇಡಿರಿ. ಜೀವಿಸಿರಬೇಕು ಹಾಗೂ ಹಾರಿಸಬೇಕು. ಈಗಂತೂ ನಿಮ್ಮ ಪಾತ್ರವು ಇದೆಯಲ್ಲವೇ? ಆದ್ದರಿಂದ ನಿಮ್ಮ ಪಾತ್ರವನ್ನು ಅರಿತುಕೊಂಡು ಶರೀರವನ್ನು ಮುಂದಕ್ಕೆ ತಳ್ಳಿರಿ. ಆದರೆ ಬ್ಯಾಲೆನ್ಸ್‌ನಲ್ಲಿ ಮುಂದಕ್ಕೆ ದೂಡಿರಿ. ಸರಿಯಾಗಿದೆ. ತೀವ್ರಗತಿಯಿಂದ ಕಾರ್ಯ ಮಾಡಿಸಬೇಡಿರಿ. ಎರಡು ದಿನ ಇಲ್ಲಿ ಇರುವುದು, ಮೂರನೆಯ ದಿನ ಇನ್ನೊಂದು ಸ್ಥಳದಲ್ಲಿ ಹೋಗುವುದು ಮಾಡಬೇಡಿರಿ. ಈಗ ಆ ಸಮಯವಲ್ಲ. ಯಾವಾಗ ಅಂತಹ ಸಮಯ ಬರುವುದೋ ಆಗ ಒಂದು ದಿನದಲ್ಲಿಯೇ ನಾಲ್ಕು ನಾಲ್ಕು ಸ್ಥಳಗಳಿಗೂ ಹೋಗಬೇಕಾಗುವುದು. ಆದರೆ ಈಗಲೇ ಅಲ್ಲ.

**ಸಭೆಯೊಂದಿಗೆ**: ನಿಮ್ಮೆಲ್ಲರದೂ ಏನು ವಿಚಾರವಿದೆ? ಸರಿಯಾಗಿದೆಯಲ್ಲವೇ?

(ನಿರ್ಮಲಾ ಸಹೋದರಿಯೊಂದಿಗೆ) ಒಳಿತಾಯಿತು. ನಾಲ್ಕೂ ಕಡೆ ಏಷ್ಯಾವನ್ನು ಚೆನ್ನಾಗಿ ಪಾಲನೆ ಮಾಡಿದ್ದೀಯೇ. ಸೇವೆಯ ಪಾತ್ರವನ್ನೂ ಚೆನ್ನಾಗಿ ಅಭಿನಯಿಸಿದ್ದೀಯೆ. ಯೂರೋಪ್‌ನವರಾಗಲೀ, ಆಸ್ಟ್ರೇಲಿಯಾದವರಾಗಲೀ, ಆಫ್ರಿಕಾದವರಾಗಲೀ..... ಎಲ್ಲರೂ ತುಂಬಾ ಚೆನ್ನಾಗಿ ಜವಾಬ್ದಾರಿಯಿಂದ ಪಾತ್ರವನ್ನು ಅಭಿನಯಿಸಿದ್ದೀರಿ. ಹಾಗೂ ಎಷ್ಟು ಗಮನ ನೀಡಿದಿರೋ ಅಷ್ಟು ಪ್ರತ್ಯಕ್ಷ ಫಲವಾಗಿ ಸಫಲತೆಯೂ ಸಿಕ್ಕಿತು. ಆಸ್ಟ್ರೇಲಿಯಾದವರ ಕರ್ತವ್ಯವಾಗಿದ್ದುದರಿಂದ ಅವರು ಮಾಡಿದರು ಎನ್ನುವುದು ಸರಿಯಲ್ಲ. ಎಲ್ಲಾ ಕಡೆಯ ಡಬಲ್ ವಿದೇಶೀಯರು ಒಳೊಳ್ಳೆಯ ಆತ್ಮರನ್ನು ಮಧುಬನದವರೆಗೆ ಕರೆತಂದರು ಹಾಗೂ ಸಫಲತೆ ಪಡೆದರು. ಬೆಂಬಲವಾಗಿ ಎಲ್ಲಾ ಸಾಥಿಗಳೂ ಇದ್ದರು ಹಾಗೂ ಸದಾ ಇರಲೇಬೇಕು. (ಈ ಸಲ ಜರ್ಮನಿಯವರು ಅನೇಕರು ಬಂದಿದ್ದಾರೆ) ಜರ್ಮನಿಯವರು ಕೈ ಎತ್ತಿರಿ. ಚೆನ್ನಾಗಿದೆ. ಹೇಗೆ ಆಸ್ಟ್ರೇಲಿಯಾದವರು ಪ್ರತ್ಯಕ್ಷ ಪರಿವರ್ತನೆಯ ಸ್ವರೂಪವನ್ನು ತೋರಿಸಿದರೋ ಹಾಗೆ ಜರ್ಮನಿಯವರು ಎಂತಹ ಪ್ರತ್ಯಕ್ಷಸ್ವರೂಪವನ್ನು ತೋರಿಸಬೇಕೆಂದರೆ ಪ್ರತಿಯೊಂದು ಸೇವಾಕೇಂದ್ರದಲ್ಲಿ ಎಲ್ಲರಿಗಿಂತಲೂ ಉತ್ತಮರು ಹಾಗೂ ಸಂಖ್ಯೆಯಲ್ಲಿಯೂ ಎಲ್ಲರಿಗಿಂತಲೂ ನಂಬರ್‌ಒನ್ ಆಗಬೇಕು. ಈಗ ನೋಡುವೆವು - ಜರ್ಮನಿಯವರ ಕಮಾಲ್ ನೋಡುವೆವು. ಇಡೀ ಬ್ರಾಹ್ಮಣ ಪರಿವಾರದ ದೃಷ್ಟಿಯು ಜರ್ಮನಿಯ ಮೇಲೆ ಇದೆ. ಏಕೆಂದರೆ ಭವಿಷ್ಯದಲ್ಲಿ ಜರ್ಮನಿಯು ತುಂಬಾ ಸಹಯೋಗಿ ಆಗಲಿದೆ. ಈಗಲೂ ಸಹ ನೆರವು ನೀಡುತ್ತಿದೆ. ಶುಭಾಶಯಗಳು, ಈಗ ಎಂತಹ ಕಮಾಲ್ ಮಾಡಿ ತೋರಿಸಿರೆಂದರೆ ಅದನ್ನು ಯಾರೂ ಮಾಡಿರಬಾರದು. ಲಂಡನ್ನಿನವರೂ ಸಹ ಮಾಡಿರಬಾರದು (ಲಂಡನ್ನಿನವರು ತ್ಯಾಗ ಮಾಡಿದ್ದಾರೆ). ಇದು ತ್ಯಾಗವಲ್ಲ, ಭಾಗ್ಯವಾಗಿದೆ. ಲಂಡನ್ನಿನವರು ತಮ್ಮ ಭಾಗ್ಯವನ್ನು ಮಾಡಿಕೊಂಡರು. ಆಗಿದೆ ತಾನೇ? ಭಾಗ್ಯವನ್ನು ಮಾಡಿಕೊಂಡಿದ್ದಾರೋ ಅಥವಾ ತ್ಯಾಗ ಮಾಡಿದ್ದಾರೋ? ಏನು ಶಿಕ್ಷಣ ನೀಡಲಾಯಿತೋ ಅದರ ಫಲವನ್ನಂತೂ ಕೊಡಬೇಕು. ಫಲವು ಇತರರಿಗೆ ಸಹಯೋಗ ನೀಡುವುದಾಗಿದೆ. ಕೋರಿಕೆಯಾಗಿದೆ. ಇದು ಲಂಡನ್ ಹಾಲ್ (ಪಡಸಾಲೆ) ಆಗಿದೆ. ಲಂಡನ್ನಿನದೇ ಹಾಗೂ ಉಳಿದವರೆಲ್ಲವೂ ಕೋಣೆಗಳಾಗಿವೆ. ಒಂದೊಂದು ದೊಡ್ಡದು ಒಂದೊಂದು ಸಣ್ಣದು ಇವೆ. ಖುಷಿಯಾಗಿದ್ದೀರಲ್ಲವೇ. ಒಳ್ಳೆಯದು

ಶಿಕ್ಷಕಿಯರು ಕೈ ಎತ್ತಿರಿ. ಅನೇಕರಿದ್ದಾರೆ (ಈದಿನ ಹಿಂದೆ ಕುಳಿತುಕೊಂಡಿದ್ದಾರೆ) ದೂರವಿದ್ದರೂ ಸಹ ಸಮೀಪ ಆಗಿದ್ದೀರಿ. ಶರೀರದಿಂದ ದೂರವಿದ್ದೀರಿ. ಆದರೆ ಮನಸ್ಸಿನಿಂದ ತುಂಬಾ ಸಮೀಪ ಇದ್ದೀರಿ. ಶಿಕ್ಷಕಿಯರು ಚೆನ್ನಾಗಿ ಪರಿಶ್ರಮಿಸುತ್ತಾ ಇದ್ದಾರೆ. ನಾಲ್ಕೂ ಕಡೆಯ ಶಿಕ್ಷಕಿಯರು ಪರಿಶ್ರಮ ಹಾಗೂ ಧೈರ್ಯದ ಪ್ರತ್ಯಕ್ಷ ರೂಪವನ್ನು ತೋರಿಸುತ್ತಾ ಇದ್ದಾರೆ. ಒಳ್ಳೆಯದು. ಯಾರು ಮೊದಲನೆಯ ಸಲ ಬಂದಿದ್ದೀರೋ ಅವರು ಕೈ ಎತ್ತಿರಿ. ನಿಮ್ಮೆಲ್ಲರಿಗೂ ದೃಷ್ಟಿಯು ಸಿಕ್ಕಿತೋ ಇಲ್ಲವೋ? ಏನು ಹೇಳುತ್ತೀರಿ?

ರಿವೈಸ್ ಕೋರ್ಸ್ 22-03-1996.

**ಬ್ರಾಹ್ಮಣ ಜೀವನದ ವ್ಯಕ್ತಿತ್ವ - ಸರ್ವ ಪ್ರಶ್ನೆಗಳಿಂದ ಅತೀತವಾಗಿ ಮತ್ತು ಪ್ರಸನ್ನ ಚಿತ್ತರಾಗಿ ಇರುವುದು.**

"ಬ್ರಾಹ್ಮಣರ ಜೀವನದಲ್ಲಿ ಪ್ರಾಪ್ತಿಯಾಗದ ವಸ್ತು ಯಾವುದು ಇಲ್ಲ" ಎಂದು ಬ್ರಾಹ್ಮಣರ ಪ್ರಾಪ್ತಿಗಳ ಪಟ್ಟಿಯನ್ನು ಬಾಪ್‌ದಾದಾ ನೋಡುತ್ತಿದ್ದಾರೆ. ಯಾರ ಹತ್ತಿರ ಸರ್ವಪ್ರಾಪ್ತಿಗಳಿವೆಯೋ ಅವರ ಚಿಹ್ನೆಯು ಪ್ರತ್ಯಕ್ಷ ಜೀವನದಲ್ಲಿ ಹೇಗೆ ಕಂಡು ಬರುತ್ತದೆ? ಸದಾ ಅವರ ಮುಖ ಹಾಗೂ ನಡವಳಿಕೆಯಲ್ಲಿ ಪ್ರಸನ್ನತೆಯ ವ್ಯಕ್ತಿತ್ವವು ಗೋಚರವಾಗುವುದು. ಅವರದು ಯಾರನ್ನಾದರೂ ಆಕರ್ಷಿತರನ್ನಾಗಿ ಮಾಡುವ ವ್ಯಕ್ತಿತ್ವವಾಗಿರುತ್ತದೆ ಆದ್ದರಿಂದ ಸರ್ವಪ್ರಾಪ್ತಿಗಳ ಗುರುತು ಪ್ರಸನ್ನತೆಯ ವ್ಯಕ್ತಿತ್ವವಾಗಿದೆ. ಅದನ್ನು ಸಂತುಷ್ಟತೆಯೆಂದೂ ಕರೆಯಲಾಗುತ್ತದೆ. ಯಾವ ಚಿಕ್ಕ ಪರಿಸ್ಥಿತಿ ಬಂದರೂ ಕೂಡ ಏಕೆ, ಏನು, ಹೇಗೆ, ಯಾವಾಗ ಮುಂತಾದ ಪ್ರಶ್ನೆಗಳು ಕೆಲ ಮಕ್ಕಳನ್ನು ಕಾಡಿಸುತ್ತವೆ ಇವರು ಪ್ರಶ್ನೆ ಚಿತ್ತರಾಗಿದ್ದಾರೆ. ಈ ಪ್ರಶ್ನೆಗಳೆಲ್ಲವೂ ಗಡಿಬಿಡಿ ಅಥವಾ ಗಾಬರಿಯ ಚಿಹ್ನೆಗಳಾಗಿವೆ. ಹಾಗೂ ಸರ್ವಪ್ರಾಪ್ತಿ ಸ್ವರೂಪರಾದವರು ಸದಾ ಪ್ರಸನ್ನ ಚಿತ್ತರಾಗಿರುತ್ತಾರೆ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನನ್ನ ಮುಖ ಮತ್ತು ನಡವಳಿಕೆಯಲ್ಲಿ ಸದಾ ಪ್ರಸನ್ನತೆಯ ವ್ಯಕ್ತಿತ್ವ ಗೋಚರವಾಗುವ ಸರ್ವಪ್ರಾಪ್ತಿ ಸ್ವರೂಪ.

2. ನಾನು ಪರಿಸ್ಥಿತಿಗಳಲ್ಲಿ ಏಕೆ, ಏನು ಎಂಬ ಪ್ರಶ್ನೆಗಳಿಂದ ಅತೀತವಾಗಿ ಪ್ರಸನ್ನಚಿತ್ತವಾಗಿ, ಸಂಪನ್ನವಾಗಿ ಇದ್ದೇನೆ.

3. ನಾನು ರಾಯಲ್ ಇಚ್ಛೆಗಳನ್ನು ಸಮಾಪ್ತಿ ಮಾಡಿ ತಂದೆಯ ಸಮಾನವಾಗಿ ಸಂಪನ್ನವಾಗಿ, ಸಂಪೂರ್ಣ ವಾಗುವ ಬಾಪ್ ಸಮಾನ ಸ್ವರೂಪ.

4. ನಾನು ಅಲ್ಪಕಾಲದ ಪ್ರಶಂಸೆಯ ಆಧಾರದಿಂದ ನನ್ನ ಪ್ರಸನ್ನತೆ ಇದೆಯೇ ಎಂದು ಪರಿಶೀಲಿಸಿಕೊಂಡು ಪರಿವರ್ತನೆ ಮಾಡಿರುವ ಸದಾಕಾಲದ ಪ್ರಸನ್ನ ಚಿತ್ತ ಸ್ವರೂಪ.

5. ನಾನು ಸೇವೆಯಲ್ಲಿ ರಾಯಲ್ ಕೋರಿಕೆಗಳಾದ ಹೆಸರು, ಗೌರವ ಕೀರ್ತಿಗಳಿಗೆ ಅತೀತವಾಗಿ ಇದ್ದು ಬಾಪ್‌ದಾದಾರವರ ಹೃದಯದಲ್ಲಿ ಸ್ಥಾನ,ಮಾನವನ್ನು ಪಡೆಯುವ ಪ್ರಾಪ್ತಿ ಸ್ವರೂಪ.

6. ನಾನು ಬ್ರಾಹ್ಮಣ ಜೀವನದಲ್ಲಿ ಎಂತಹ ಪರಿಸ್ಥಿತಿಯಲ್ಲಾದರೂ ನನ್ನ ಮೂಡನ್ನು ಸದಾ ಹರ್ಷಿತವಾಗಿ ಮತ್ತು ಜಾಗರೂಕವಾಗಿ (ಚಿಯರ್ ಫುಲ್, ಕೇರ್ ಫುಲ್) ಇಟ್ಟುಕೊಂಡಿದ್ದೇನೆ.

7. ನಾನು ಕಾರಣವನ್ನು ನಿವಾರಣೆ ಮಾಡಿ ನನ್ನ ಮೂಡನ್ನು ಪರಿವರ್ತನೆ ಮಾಡಿಕೊಂಡಿದ್ದೇನೆ.

8. ನಾನು ತಂದೆಯ ಸಮಾನ ತಯಾರಾಗಿ ತಂದೆಯ ಪ್ರೀತಿಯ ರಿಟರ್ನ್ ಅನ್ನು ಕೊಟ್ಟಿದ್ದೇನೆ.

9. ನಾನು "ವಿಜಯವು ನನ್ನ ಜನ್ಮ ಸಿದ್ಧ ಅಧಿಕಾರವಾಗಿದೆ", "ಸಫಲತೆಯು ನನ್ನ ಜನ್ಮಸಿದ್ಧ ಅಧಿಕಾರವಾಗಿದೆ" ಎಂಬ ನಿಶ್ಚಯ ಬುದ್ಧಿ ವಿಜಯಂತಿ ಸ್ವರೂಪ.

10. ನಾನು ಸಮಯವನ್ನು, ಸಂಕಲ್ಪವನ್ನು, ಸಂಪತ್ತಿಯನ್ನು, ಎಲ್ಲಾ ಖಜಾನೆಗಳನ್ನು ಸಫಲ ಮಾಡಿ ಸಫಲತೆಯನ್ನು ಪಡೆಯುವ ಸಫಲತಾ ಸ್ವರೂಪ.

11. ನಾನು ಸದಾ ಪ್ರಸನ್ನ ಚಿತ್ ಆಗಿ ಇರಬೇಕು ಎಂಬ ಲಕ್ಷ್ಯವನ್ನಿಟ್ಟುಕೊಂಡ ಪ್ರಸನ್ನಚಿತ್ತ ಸ್ವರೂಪ.

12. ನಾನು ಏಕೆ, ಏನು, ಹೇಗೆ ಎಂಬ ಪ್ರಶ್ನೆಗಳನ್ನು ಸ್ವಾಹ ಮಾಡಿ ಸ್ವಯಂ ಮತ್ತು ಅನ್ಯರ ಸಮಯವನ್ನು ಉಳಿತಾಯ ಮಾಡಿದ್ದೇನೆ.

13. ನಾನು ಸದಾ ನಿಶ್ಚಯ ಮತ್ತು ಜನ್ಮಸಿದ್ಧ ಅಧಿಕಾರದ ನಶೆಯಲ್ಲಿದ್ದು ಗೊಂದಲವನ್ನು ಸಮಾಪ್ತಿ ಮಾಡಿದ್ದೇನೆ.